ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 5 । ಸಂಚಿಕೆ : 10 । ಅಕ್ಟೋಬರ್ - 2023 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

## ನಾಡ ಹಬ್ಬ ಮೈಸೂರು ದಸರಾ ಶುಭಾಶಯಗಳು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ
ಆಡಳಿತಮಂಡಳಿ ನಿರ್ದೇಶಕರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳ ನಿ., ಬೆಂಗಳೂರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು





# 70ನೇ ಅಖಿಲ ಭಾರತ ಸಹಕಾರ ಸಪ್ತಾಹ–2023

**ಈ ಬಾರಿಯ ಸಹಕಾರ ಸಪ್ತಾಹದ ಧ್ಯೇಯ**

**"Role of Cooperatives in $5 Trillion Economy and SDGs"**

**"5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು"**

| | |
|---|---|
| 14.11.2023<br>ಮಂಗಳವಾರ<br>Tuesday | **Recent Developments in Cooperatives.**<br>ಸಹಕಾರ ಸಂಘ ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು. |
| | |
| 15.11.2023<br>ಬುಧವಾರ<br>Wednesday | **Revitalization of Non-Credit Cooperatives and Financial Inclusion.**<br>ಸಾಲೇತರ ಸಹಕಾರ ಸಂಘಗಳ ಪುನಃಶ್ಚೇತನ ಹಾಗೂ ಆರ್ಥಿಕ ಸೇರ್ಪಡೆ. |
| | |
| 16.11.2023<br>ಗುರುವಾರ<br>Thursday | **Adoption and Upgradation of Technology for Digitalization of Cooperatives.**<br>ಸಹಕಾರ ಸಂಸ್ಥೆಗಳನ್ನು ಡಿಜಿಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು ಉನ್ನತೀಕರಣ. |
| | |
| 17.11.2023<br>ಶುಕ್ರವಾರ<br>Friday | **Emerging Areas and Ease-of-Doing Business for Cooperatives.**<br>ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರಿಯೆ ಮತ್ತು ಉದಯೋನ್ಮುಖ ವಲಯಗಳು. |
| | |
| 18.11.2023<br>ಶನಿವಾರ<br>Saturday | **Strengthening "Public–Private–Cooperative Partnership"**<br>ಸಾರ್ವಜನಿಕ – ಖಾಸಗಿ – ಸಹಕಾರಿ ಸಹಭಾಗಿತ್ವವನ್ನು ಬಲಪಡಿಸುವುದು. |
| | |
| 19.11.2023<br>ಭಾನುವಾರ<br>Sunday | **Cooperatives for Women, Youth, and Weaker Sections.**<br>ಮಹಿಳೆಯರು, ಯುವಜನ ಮತ್ತು ಅಬಲವರ್ಗಕ್ಕೆ ಸಹಕಾರ ಸಂಸ್ಥೆಗಳು. |
| | |
| 20.11.2023<br>ಸೋಮವಾರ<br>Monday | **Revamping of Cooperative Education and Training.**<br>ಸಹಕಾರ ಶಿಕ್ಷಣ, ತರಬೇತಿಯ ಪರಿಷ್ಕರಣೆ. |

# ದಿನಾಂಕ 20/09/2023 ಬುಧವಾರ ರಂದು ಭಾರತೀಯ ರಾಷ್ಟ್ರೀಯ ಸಹಕಾರಿ ಒಕ್ಕೂಟದಲ್ಲಿ ನಡೆದ ವಾರ್ಷಿಕ ಮಹಾ ಸಭೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ವತಿಯಿಂದ ಮಂಡಿಸಿದ ಬೇಡಿಕೆಗಳು

ಗೆ,

**ಶ್ರೀ ದಿಲೀಪ ಸಂಘಾನಿಯಾ**
ಅಧ್ಯಕ್ಷರು, ಭಾರತದ ರಾಷ್ಟ್ರೀಯ ಸಹಕಾರಿ ಒಕ್ಕೂಟ
ನವದೆಹಲಿ.

**ವಿಷಯ : ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಕ್ರೆಡಿಟ್ ಸೊಸೈಟಿಗಳು ಎದುರಿಸುತ್ತಿರುವ ಸಮಸ್ಯೆಗಳು.**

**********

ಗೌರವಾನ್ವಿತರೆ,

ಕರ್ನಾಟಕ ರಾಜ್ಯ ಸಹಕಾರ ಸಾಲ ಸಂಘಗಳ ಒಕ್ಕೂಟದ ಪರವಾಗಿ ನಾವು ಪ್ರಸ್ತುತ ಕರ್ನಾಟಕ ರಾಜ್ಯದ ಪತ್ತಿನ ಸಹಕಾರ ಸಂಘಗಳ ಮೇಲೆ ಪರಿಣಾಮ ಬೀರುತ್ತಿರುವ ನಿರ್ಣಾಯಕ ಸಮಸ್ಯೆಗಳ ಸರಣಿಯನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ಈ ಸಮಸ್ಯೆಗಳು ಸದಸ್ಯರು ಮತ್ತು ಠೇವಣಿದಾರರಲ್ಲಿ ಕಳವಳಕ್ಕೆ ಕಾರಣವಾಗಿವೆ ಮತ್ತು ಅವುಗಳನ್ನು ಪರಿನಾಮಕಾರಿ ಪರಿಹಾರಕ್ಕೆ ನಿಮ್ಮ ಗೌರವಾನ್ವಿತ ಸಂಸ್ಥೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದು ನಾವು ನಂಬುತ್ತೇವೆ.

1. **ಆದಾಯ ತೆರಿಗೆ ಸಮಸ್ಯೆಗಳು :** ಕರ್ನಾಟಕ ರಾಜ್ಯದ ಪತ್ತಿನ ಸಹಕಾರ ಸಂಘಗಳ ಆದಾಯ ತೆರಿಗೆ ಸಮಸ್ಯೆಗಳೊಂದಿಗೆ ಅಂಟಿಕೊಂಡು ವಿಶೇಷವಾಗಿ ವಿಭಾಗಗಳು 194A, 194N, 269ST, ಮತ್ತು 269SS. ಇವುಗಳ ಕಾರ್ಯಚರಣೆಯಿಂದ ಅಡ್ಡಿಯಾಗದಂತೆ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಈ ವಿಷಯಗಳ ಬಗ್ಗೆ ಸ್ಪಷ್ಟೀಕರಣಗಳನ್ನು ಮತ್ತು ಮಾರ್ಗದರ್ಶನದ ಅಗತ್ಯವಿದೆ.
2. **ಠೇವಣಿಗಳ ಮೇಲಿನ ವಿಮೆ :** ಸಹಕಾರಿ ಕ್ರೆಡಿಟ್ ಸೊಸೈಟಿಗಳ ಠೇವಣಿದಾರರಿಗೆ ವಿಮಾ ರಕ್ಷಣೆಯನ್ನು ಒದಗಿಸುವ ಆಯ್ಕೆಗಳನ್ನು ಅನ್ವೇಷಿಸುವುದು ಅತ್ಯಗತ್ಯ, ಬ್ಯಾಂಕ್ ಠೇವಣಿದಾರರು ಅನುಭವಿಸುವ ವ್ಯಾಪ್ತಿಯಂತೆಯೇ. ಈ ಹಂತವು ಠೇವಣಿದಾರರ ವಿಶ್ವಾಸ ಮತ್ತು ಭದ್ರತೆಯನ್ನು ಹೆಚ್ಚಿಸುತ್ತದೆ.
3. **ಸಾಮಾನ್ಯ ಅಪ್ಲಿಕೇಶನ್ ಸಾಫ್ಟ್‌ವೇರ್ :** ಎಲ್ಲಾ ಸಹಕಾರಿ ಕ್ರೆಡಿಟ್ ಸೊಸೈಟಿಗಳಿಗೆ ಸಾಮಾನ್ಯ ಅಪ್ಲಿಕೇಶನ್ ಸಾಫ್ಟ್‌ವೇರ್ ಪ್ಲಾಟ್‌ಫಾರ್ಮ್‌ನ ಅಳವಡಿಕೆಯಿಂದ ಕಾರ್ಯಚರಣೆಗಳನ್ನು ಸುಗಮಗೊಳಿಸುತ್ತದೆ, ಪಾರದರ್ಶಕತೆಯನ್ನು ಸುಧಾರಿಸುತ್ತದೆ ಮತ್ತು ದಕ್ಷತೆಯನ್ನು ಹೆಚ್ಚಿಸುತ್ತದೆ. ಈ ವ್ಯವಸ್ಥೆಗಳನ್ನು ಪ್ರಮಾಣೀಕರಿಸುವುದು ಒಂದು ಮಹತ್ವದ ಹೆಜ್ಜೆಯಾಗಿದೆ.
4. **CIBIL ಸ್ಕೋರಿಂಗ್ :** ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್‌ಗಳಂತೆ, ಸಹಕಾರಿ ಕ್ರೆಡಿಟ್ ಸೊಸೈಟಿಗಳು ಸಾಲಗಾರರ ಸಾಲದ ಅರ್ಹತೆಯನ್ನು ನಿರ್ಣಯಿಸಲು CIBIL ನಂತಹ ಕ್ರೆಡಿಟ್ ಸ್ಕೋರಿಂಗ್ ಕಾರ್ಯವಿಧಾನಗಳನ್ನು ಅಳವಡಿಸಲು ಪ್ರೋತ್ಸಾಹಿಸಬೇಕು. ಇದು ಅಪಾಯವನ್ನು ತಗ್ಗಿಸಲು ಮತ್ತು ಸಹಕಾರಿ ಸಾಲ ವಲಯವನ್ನು ಬಲಪಡಿಸಲು ಸಹಾಯ ಮಾಡುತ್ತದೆ.
5. **ಸಾಲ ವಸೂಲಾತಿ ನೀತಿಗಳು :** ಸಾಲ ವಸೂಲಾತಿ ಕಾರ್ಯವಿಧಾನಗಳನ್ನು ಸರಳೀಕರಿಸುವುದು, ಸುರಕ್ಷಿತಗೊಳಿಸುವುದು ಮತ್ತು ತ್ವರಿತಗೊಳಿಸುವುದು ಬಹಳ ಮುಖ್ಯವಾಗಿದೆ. ಸಹಕಾರಿ ಪತ್ತಿನ ಸಂಘಗಳಿಗೆ ತಮ್ಮ ನಿಧಿಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಉತ್ತಮವಾಗಿ ವ್ಯಾಖ್ಯಾನಿಸಲಾದ ಮತ್ತು ಸಮರ್ಥ ಸಾಲ ವಸೂಲಾತಿ ನೀತಿಗಳ ಅಗತ್ಯವಿರುತ್ತದೆ.
6. **ಸರ್ಕಾರಿ ಭದ್ರತೆಗಳಲ್ಲಿ ಹುಡಿಕೆ :** ಇತರ ಹಣಕಾಸು ಸಂಸ್ಥೆಗಳಂತೆಯೇ ಸರ್ಕಾರಿ ಭದ್ರತೆಗಳಲ್ಲಿ ಹೂಡಿಕೆ ಮಾಡಲು ಸಹಕಾರಿ ಕ್ರೆಡಿಟ್ ಸೊಸೈಟಿಗಳಿಗೆ ಅವಕಾಶ ನೀಡುವುದು, ಸ್ಥಿರ ಹೂಡಿಕೆ ಮಾರ್ಗವನ್ನು ಒದಗಿಸಬಹುದು ಮತ್ತು ಅವುಗಳು ಬಂಡವಾಳವನ್ನು ವೈವಿಧ್ಯಗೊಳಿಸಬಹುದು.
7. **ಸರ್ಕಾರಿ ಯೋಜನೆ ಸಬಲೀಕರಣ :** ಸಹಕಾರಿ ಪತ್ತಿನ ಸಂಘಗಳು ವಿವಿಧ ಸರ್ಕಾರಿ ಯೋಜನೆಗಳ ಅಡಿಯಲ್ಲಿ ಪ್ರವೇಶ ಮತ್ತು ಸಬಲೀಕರಣವನ್ನು ಹೊಂದಿರಬೇಕು. ಈ ಯೋಜನೆಗಳ ಪ್ರಯೋಜನಗಳನ್ನು ತಮ್ಮ ಸದಸ್ಯರಿಗೆ ವಿಸ್ತರಿಸಲು ಮತ್ತು ಆರ್ಥಿಕ ಸೇರ್ಪಡೆಯನ್ನು ಉತ್ತೇಜಿಸಲು ಅವರಿಗೆ ಅನುವು ಮಾಡಿಕೊಡುತ್ತದೆ.

ಈ ತುರ್ತು ವಿಷಯಗಳ ಬಗ್ಗೆ ನಿಮ್ಮ ಗಮನವನ್ನು ನಾವು ಸೆಳೆಯುತ್ತೇವೆ (ಕೇಂದ್ರಿಕರಿಸುತ್ತೇವೆ). ಕರ್ನಾಟಕ ಸಹಕಾರ ಸಾಲ ಸಂಘಗಳ ಒಕ್ಕೂಟವು ತಮ್ಮ ಸದಸ್ಯರಿಗೆ ಮತ್ತು ಒಟ್ಟಾರೆ ವಲಯಕ್ಕೆ ಪ್ರಯೋಜನಕಾರಿ ಪರಿಣಾಮಕಾರಿ ಪರಿಹಾರಗಳನ್ನು ಕಂಡುಹಿಡಿಯಲು ಭಾರತೀಯ ರಾಷ್ಟ್ರೀಯ ಸಹಕಾರಿ ಒಕ್ಕೂಟದೊಂದಿಗೆ ಸಹಕರಿಸಲು ಉತ್ಸುಕವಾಗಿದೆ.

ಈ ಕಾಳಜಿಗಳನ್ನು ಮತ್ತಷ್ಟು ಚರ್ಚಿಸಲು ಮತ್ತು ಅವುಗಳ ಪರಿಹಾರಕ್ಕಾಗಿ ಒಟ್ಟಾಗಿ ಕೆಲಸ ಮಾಡಲು ನಾವು ಅವಕಾಶಕ್ಕಾಗಿ ಎದುರು ನೋಡುತ್ತಿದ್ದೇವೆ. ಈ ವಿಷಯದಲ್ಲಿ ನಿಮ್ಮ ಮಾರ್ಗದರ್ಶನ ಮತ್ತು ಬೆಂಬಲವನ್ನು ಬಹಳವಾಗಿ ಪ್ರಶಂಸಿಸಲಾಗುತ್ತದೆ.

ನಿಮ್ಮ ಸಮಯ ಮತ್ತು ಪರಿಗಣನೆಗೆ ಧನ್ಯವಾದಗಳು.
**ಡಾ. ಸಂಜಯ ಪಿ. ಹೊಸಮಠ**
**ರವೀಂದ್ರ ಪ್ರಲ್ಹಾದ್ ಕಲಬುರಗಿ**
ನಿರ್ದೇಶಕರು
ಕರ್ನಾಟಕ ರಾಜ್ಯ ಸಹಕಾರಿ ಕ್ರೆಡಿಟ್ ಸೊಸೈಟಿ ಫೆಡರೇಶನ್ ಲಿಮಿಟೆಡ್.,
ಬೆಂಗಳೂರು.

## ಸಂಪಾದಕೀಯ



**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು

**ರಾಜ್ಯದಲ್ಲಿ 2.40 ಕೋಟಿ ಸದಸ್ಯರು ಸಹಕಾರ ಸಂಘಗಳಲ್ಲಿದ್ದು ರಾಜ್ಯದ ಬಹುತೇಕ ಕುಟುಂಬಗಳು ಸಹಕಾರ ಕಕ್ಷೆಯಲ್ಲಿ ಬರುವುದರಿಂದ ಪತ್ತಿನ ಸಹಕಾರ ಸಂಘಗಳು ಬರದ ಪರಿಸ್ಥಿತಿಯಲ್ಲಿ ತಮ್ಮ ಸದಸ್ಯರುಗಳಿಗೆ ಗರಿಷ್ಠ ಪ್ರಮಾಣದಲ್ಲಿ ಆರ್ಥಿಕ ನೆರವು ನೀಡಿ ಸದಸ್ಯರ ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ನೆರವಾಗಬೇಕಿದೆ ಇಂಥ ಅನಿವಾರ್ಯ ಸಂದರ್ಭದಲ್ಲಿ ಸಹಕಾರ ಸಂಘಗಳು ಸಾಮಾಜಿಕ ಕಳಕಳಿಯನ್ನು ತೋರಲಿ ಎಂದು ಆಶಿಸುತ್ತೇನೆ.**

# ರಾಜ್ಯದಲ್ಲಿ ಬರ ಪರಿಸ್ಥಿತಿ; ಸಹಕಾರ ಸಂಸ್ಥೆಗಳು ನೆರವಾಗಲಿ

ರಾಜ್ಯದಲ್ಲಿ ಈ ವರ್ಷ ಪ್ರಾಕೃತಿಕ ಕಾರಣಗಳಿಂದಾಗಿ ಬರ ಪರಿಸ್ಥಿತಿ ಇದೆ. ವಾಡಿಕೆಗಿಂತ ಅತಿ ಕಡಿಮೆ ಮಳೆಯಾಗಿದ್ದು ಬಹುತೇಕ ಜಲಾಶಯಗಳಲ್ಲಿ ನೀರು ಪೂರ್ಣಪ್ರಮಾಣದಲ್ಲಿ ಶೇಖರಣೆಯಾಗದ ಕಾರಣ ಕೃಷಿಗೆ, ಜಾನುವಾರುಗಳಿಗೆ ಹಾಗೂ ನಾಗರೀಕರಿಗೆ ಕುಡಿಯುವ ನೀರು ಪೂರೈಕೆ ಮಾಡುವುದು ಕೂಡ ಕಷ್ಟಕರ ಕೆಲಸವಾಗಿದೆ.

ಮತ್ತೊಂದೆಡೆ ರಾಜ್ಯದ ಬಹುತೇಕ ತಾಲ್ಲೂಕುಗಳು ಬರ ಪರಿಸ್ಥಿತಿ ಎದುರಿಸುತ್ತಿರುವುದರಿಂದ ಬೆಳೆ ವೈಪಲ್ಯ ಎದ್ದು ಕಾಣುತ್ತಿದೆ ರಾಜ್ಯದ ರೈತರ ಪಾಲಿಗೆ ಈ ವರ್ಷ ಹಲವಾರು ಸಂಕಷ್ಟಗಳನ್ನು ತಂದೊಡ್ಡಲಿದೆ.

ರಾಜ್ಯ ಸರ್ಕಾರ ಬರಪರಿಸ್ಥಿತಿಗೆ ಅನುಗುಣವಾಗಿ ಉಪಯುಕ್ತ ಕ್ರಮಗಳನ್ನು ಕೈಗೊಳ್ಳಲಾರಂಭಿಸಿದೆ. ಪಶು ಸಂಗೋಪನೆ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ. ಇವೆಲ್ಲವುಗಳನ್ನು ಗಮನಿಸಿದಾಗ ಸಾಮಾಜಿಕ ಕಳಕಳಿಯ ತತ್ವವನ್ನು ಹೊಂದಿರುವ ಸಹಕಾರ ಸಂಸ್ಥೆಗಳು ಸದಸ್ಯರಿಗೆ ಆರ್ಥಿಕ ನೆರವು ಸೇರಿದಂತೆ ಸಾಧ್ಯವಾದ ಮಟ್ಟಿಗೆ ತಮ್ಮ ಧ್ಯೇಯೋದ್ದೇಶಗಳ ಅನ್ವಯ ಸೇವೆಗಳನ್ನು ಒದಗಿಸಿ ಮಾನವೀಯತೆ ತೋರಬೇಕಾಗುತ್ತದೆ.

ರಾಜ್ಯದಲ್ಲಿ 2.40 ಕೋಟಿ ಸದಸ್ಯರು ಸಹಕಾರ ಸಂಘಗಳಲ್ಲಿದ್ದು ರಾಜ್ಯದ ಬಹುತೇಕ ಕುಟುಂಬಗಳು ಸಹಕಾರ ಕಕ್ಷೆಯಲ್ಲಿ ಬರುವುದರಿಂದ ಪತ್ತಿನ ಸಹಕಾರ ಸಂಘಗಳು ಬರದ ಪರಿಸ್ಥಿತಿಯಲ್ಲಿ ತಮ್ಮ ಸದಸ್ಯರುಗಳಿಗೆ ಗರಿಷ್ಠ ಪ್ರಮಾಣದಲ್ಲಿ ಆರ್ಥಿಕ ನೆರವು ನೀಡಿ ಸದಸ್ಯರ ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ನೆರವಾಗಬೇಕಿದೆ. ಇಂಥ ಅನಿವಾರ್ಯ ಸಂದರ್ಭದಲ್ಲಿ ಸಹಕಾರ ಸಂಘಗಳು ಸಾಮಾಜಿಕ ಕಳಕಳಿಯನ್ನು ತೋರಲಿ ಎಂದು ಆಶಿಸುತ್ತೇನೆ. ಆಗ ಸಹಕಾರ ಸಂಘಗಳ ಧ್ಯೇಯೋದ್ದೇಶಗಳು ಗರಿಷ್ಠ ಜನರಿಗೆ ತಲುಪಿ ಚಳುವಳಿಯ ಧ್ಯೇಯವನ್ನು ಸಾಕಾರಗೊಳಿಸಿದಂತಾಗುತ್ತದೆ.

ಅಕ್ಟೋಬರ್ ಮಾಯೆಯಲ್ಲಿ ರಾಷ್ಟ್ರದಾದ್ಯಂತ ದಸರಾ ಹಬ್ಬವನ್ನು ನಾಡಹಬ್ಬವಾಗಿ ಆಚರಿಸಲಾಗುತ್ತಿದೆ. ಸರಳತೆಯ ಜೊತೆಗೆ ಮಾನವೀಯ ಕಳಕಳಿಗೆ ಹೆಚ್ಚು ಒತ್ತು ನೀಡಿ ದಸರಾ ಆಚರಣೆ ಮಾಡೋಣ. ಎಲ್ಲಾ ಸಹಕಾರಿ ಬಂಧುಗಳಿಗೆ ನವರಾತ್ರಿಯ ಹಾರ್ದಿಕ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)




ಎನ್.ಸಿ.ಯೂ.ಐ.ನ ಅಧ್ಯಕ್ಷರಾದ ಶ್ರೀ ದಿಲೀಪ್ ಸಿಂಘಾನಿ ರವರಿಗೆ ದಿ:21.09.2023 ರಂದು ಎನ್.ಸಿ.ಯೂ.ಐ. ನವದೆಹಲಿ ಇದರ 2022ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ ಮತ್ತು ಡಾ॥ ಸಂಜಯ ಪಿ. ಹೊಸಮಠರವರು ಭಾಗವಹಿಸಿ, ಸಹಕಾರ ಸಂಘಗಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಿದರು.

**ಸುಭಾಷಿತ :** ಎಲ್ಲಾ ಧರ್ಮಗಳು ಮನುಷ್ಯ ಧರ್ಮವೇ ಶ್ರೇಷ್ಠ ಎಂದಿದೆ. ಅರ್ಥೈಸಿಕೊಳ್ಳುವಲ್ಲಿ ಸೋತ ನಾವು ನಮ್ಮದೇ ಶ್ರೇಷ್ಠ ಎನ್ನುತ್ತೇವೆ. – ಕುವೆಂಪು

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಕೃಷಿ ಮೇಳಗಳು ಕೃಷಿ ಕ್ಷೇತ್ರಕ್ಕೆ ಯುವಕರನ್ನು, ಹೊಸಬರನ್ನು ಸೆಳೆಯಬೇಕು
# ಕೃಷಿ ವಿವಿಗಳು ಒಣಭೂಮಿಯಲ್ಲಿ ಕೃಷಿ ಅಭಿವೃದ್ಧಿ ಪಡಿಸುವ ಕುರಿತು ಹೆಚ್ಚು ಸಂಶೋಧನೆ ಕೈಗೊಳ್ಳಬೇಕು–ಮುಖ್ಯಮಂತ್ರಿ ಸಿದ್ದರಾಮಯ್ಯ



**ಧಾರವಾಡ :** ಕೃಷಿ ವಿವಿಗಳು ಒಣ ಭೂಮಿಯಲ್ಲಿ ಕೃಷಿ ಅಭಿವೃದ್ಧಿ ಪಡಿಸುವ ಕುರಿತು ಹೆಚ್ಚು ಸಂಶೋಧನೆ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇತ್ತೀಚೆಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಕೃಷಿಮೇಳ–2023 ಉದ್ಘಾಟಿಸಿ, ಅವರು ಮಾತನಾಡಿದರು. ಇಂದು ಶೇ.60ರಷ್ಟು ಜನ ಕೃಷಿ ಮಾಡುತ್ತಿದ್ದು, ಭಾರತವು ಕೃಷಿ ಪ್ರಧಾನ ದೇಶವಾಗಿದ್ದರೂ ಸಾಕಷ್ಟು ಜನ ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಮಳೆ ಆಧಾರಿತ ಕೃಷಿ ಭೂಮಿ ಇರುವುದರಿಂದ ಮಳೆ ಕೊರತೆಯಾಗಿ ಸಮಸ್ಯೆ ಆಗುತ್ತಿದೆ ಎಂದರು. ಯುವಕರು, ಹೆಚ್ಚು ಜನ ಕೃಷಿಯಲ್ಲಿ ತೊಡಗಿಸಿಕೊಳ್ಳುವಂತೆ ಕೃಷಿ ವಿವಿಗಳು ಕಾರ್ಯಮಾಡಬೇಕು. ವಿಶ್ವವಿದ್ಯಾಲಯದ ಸಂಶೋಧನೆ, ತಾಂತ್ರಿಕತೆಗಳು ರೈತರ ಜಮೀನುಗಳಿಗೆ ತಲುಪಿದರೆ ಮಾತ್ರ ಸಾರ್ಥಕವಾಗುತ್ತದೆ. ಕೃಷಿ ಮೇಳಗಳು ಕೃಷಿ ಕ್ಷೇತ್ರಕ್ಕೆ ಯುವಕರನ್ನು, ಹೊಸಬರನ್ನು ಸೆಳೆಯುವಂತೆ ಆಕರ್ಷಕವಾಗಿ ಸಂಘಟಿಸಬೇಕು ಎಂದರು.

ಒಣ ಬೇಸಾಯ ಮಾಡುವ ರೈತರ ಬಗ್ಗೆ ವಿಶೇಷ ಕಾಳಜಿ ಇದೆ. ಒಣಬೇಸಾಯ ಮಾಡಲು ಅಗತ್ಯ ಸುಧಾರಿತ ಹೊಸ ತಳಿಗಳ ಸಂಶೋಧನೆ ಮಾಡಬೇಕು. ಬಿತ್ತಿದ ಯಾವುದೇ ಮುಖ್ಯ ಬೆಳೆ ಹಾಳಾದರೆ, ಅದಕ್ಕೆ ಪರ್ಯಾಯವಾದ ತಕ್ಷಣದ ಬೆಳೆಗಳನ್ನು ಮಾಡಬೇಕು ಎಂಬುದರ ಬಗ್ಗೆ ವಿಜ್ಞಾನಿಗಳು ಆಸಕ್ತಿ ವಹಿಸಿ, ಸಂಶೋಧನೆ ಮಾಡಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

### ಪ್ರಯೋಗಾಲಯದ ಸಂಶೋಧನೆಗಳು ರೈತರ ಭೂಮಿಗೆ ತಲುಪಬೇಕು

"ಲ್ಯಾಬ್ ಟು ಲ್ಯಾಂಡ್" ಅಂದರೆ, ಪ್ರಯೋಗಾಲಯದ ಸಂಶೋಧನೆಗಳು ರೈತರ ಭೂಮಿಗೆ ತಲುಪಬೇಕು. ಅಂದಾಗ ಮಾತ್ರ ವಿಜ್ಞಾನಿಗಳ ಸಂಶೋಧನೆಗಳು ಫಲಪ್ರದವಾಗುತ್ತದೆ ಎಂದು ಅವರು ಹೇಳಿದರು. ರೈತರಿಗೆ ಉನ್ನತ ತಾಂತ್ರಿಕತೆ ಇರುವ ಕಟಾವು ಯಂತ್ರ ಕೃಷಿ ಭಾಗ್ಯ, ಕೃಷಿ ಯಂತ್ರಧಾರೆ ಯೊಜನೆಗಳ ಮರುಜಾರಿ ಘೋಷಿಸಲಾಗಿದೆ. ರಾಜ್ಯದಲ್ಲಿ ಸಣ್ಣ ರೈತರು ಹೆಚ್ಚಿಗೆ ಇರುವುದರಿಂದ ಉನ್ನತ ತಾಂತ್ರಿಕತೆ ಇರುವ ಕಟಾವು ಯಂತ್ರಗಳನ್ನು ರೈತರಿಗೆ ನೀಡಲು ಕ್ರಮವಹಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

### ರೈತರಿಗೆ ರೂ. 5 ಲಕ್ಷದವರೆಗೆ ಶೂನ್ಯ ಬಡ್ಡಿ ಸಾಲ

ರಾಜ್ಯ ಸರಕಾರ ಈ ವರ್ಷದಿಂದ ರೈತರಿಗೆ ರೂ. 5 ಲಕ್ಷದವರೆಗೆ ಶೂನ್ಯ ಬಡ್ಡಿ ಸಾಲ ಮತ್ತು ರೂ.15 ಲಕ್ಷದವರೆಗೆ ಕೇವಲ ಶೇ.3ರಷ್ಟು ಬಡ್ಡಿ ನಿಗದಿಗೊಳಿಸಿ, ಕ್ರಮ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

### ಮಹದಾಯಿ ಯೋಜನೆಗೆ ಬದ್ಧ

ಮಹಾದಾಯಿ ಯೋಜನೆ ಜಾರಿಗೊಳಿಸಲು ಸರಕಾರ ಬದ್ಧವಾಗಿದೆ. ಕೇಂದ್ರ ಸರಕಾರ ಶೀಘ್ರವಾಗಿ ಸ್ಪಂದಿಸಿ, ಸಮಸ್ಯೆ ಬಗೆಹರಿಸಿದರೆ ಯೋಜನೆ ಅನುಷ್ಠಾನ ಸುಲಭ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಕೇಂದ್ರ ಸರಕಾರ ಗೋವಾ ಸರಕಾರದೊಂದಿಗೆ ಸಮಾಲೋಚಿಸಿ, ಪರಿಸರ ಮತ್ತು ಅರಣ್ಯ ಸಂಬಂಧಿಸಿದ ತಕರಾರು ಪರಿಹರಿಸಿದರೆ ರಾಜ್ಯ ಸರಕಾರ ತಕ್ಷಣ ಕ್ರಮ ವಹಿಸಲಿದೆ. ರಾಜ್ಯ ಸರಕಾರಕ್ಕೆ ಹಣಕಾಸಿನ ಕೊರತೆ ಇಲ್ಲ ಎಂದು ಅವರು ಹೇಳಿದರು.

# ಶ್ರೇಷ್ಠ ಸಹಕಾರಿ ಬಿ.ಎಸ್. ವಿಶ್ವನಾಥ್ ಇನ್ನು ನೆನಪು ಮಾತ್ರ

ಸೇವಾ ಮನೋಭಾವ, ತತ್ವನಿಷ್ಠೆ, ಬದ್ಧತೆ, ರೈತರ ಬಗ್ಗೆ ಕಾಳಜಿ, ಅಬಲರ ಬಗ್ಗೆ ಅನುಕಂಪ, ಮೃದು ಮಾತು, ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ನೃತ್ಯ ಪ್ರಕಾರಗಳಲ್ಲಿ ಅಭಿರುಚಿ, ಶಿಸ್ತು, ಸಂಯಮ ಪ್ರಜ್ಞೆ, ಸುಸಂಸ್ಕೃತ ಜೀವನೋತ್ಸಾಹ, ಪ್ರೀತಿ, ವಿಶ್ವಾಸ, ಗೌರವ ಈ ಎಲ್ಲವನ್ನು ಸೇರಿಸಿ ಗೊಂಬೆಯೊಂದನ್ನು ತಯಾರಿಸಿ, ಅದಕ್ಕೆ ಜೀವ ತುಂಬಿದರೆ ಹೊರಬರುವವರೇ ಬಿ.ಎಸ್. ವಿಶ್ವನಾಥ್, ತೀರ್ಥಹಳ್ಳಿಯ ಸುತ್ತಮುತ್ತಲ ಗ್ರಾಮಸ್ಥರಿಗೆ "ವಿಶ್ವನಾಥ ಗೌಡರು", ಕನ್ನಡದ ಎಲ್ಲ ಜನರಿಗೆ "ವಿಶ್ವನಾಥ್" ದೇಶ ವಿದೇಶಗಳವರಿಗೆ "ವಿಶ್ವನಾಥನ್" ತುಂಬ ಹತ್ತಿರದ ಆತ್ಮೀಯರಿಗೆ "ವಿಶು" ಆಗಿರುವ ಬಿ.ಎಸ್. ವಿಶ್ವನಾಥ್ ಅವರ 50 ವರ್ಷಗಳ ಸಾಧನೆ 500 ವರ್ಷ ಕಾಲ ನೆನಪಿನಲ್ಲಿ ಉಳಿಯ ಬಲ್ಲದಾಗಿದ್ದು, ಮುಂದೊಂದು ದಿನ ಅದು ದಂತಕಥೆಯ ರೂಪ ತಾಳಿದರೂ ಅಚ್ಚರಿಪಡಬೇಕಿಲ್ಲ.

1934 ಜನವರಿ–6, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಬಸರವಳ್ಳಿ ಗ್ರಾಮದ ಸಾಮಾನ್ಯ ರೈತ ಕುಟುಂಬದ ಜನಪ್ರಿಯ ರೈತ ಮುಖಂಡ ಸುಬ್ಬಯ್ಯಗೌಡರು ಮತ್ತು ಸಾಧ್ವಿಶಾರದಮ್ಮ ರವರ ಕುಟುಂಬದಲ್ಲಿ ಸಂತಸ, ಸಂಭ್ರಮ ಮೊದಲ ಮಗುವೇ ಗಂಡು. ಈ ಮಗು ಮುಂದೊಂದು ದಿನ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ, ಗೌರವ ಪ್ರಶಸ್ತಿಗಳಿಗೆ ಪಾತ್ರನಾಗುತ್ತಾನೆ ಎಂಬ ಕಲ್ಪನೆ ಅವರಿಗಿದ್ದಿರಬಹುದು! ಯಾಕೆಂದರೆ, ಮಗನಿಗೆ ಅವರಿಟ್ಟ ಹೆಸರು "ವಿಶ್ವನಾಥ" ಎಂಬುದು ಅವರ ಸಾಧನೆ – ಸಿದ್ಧಿಗಳ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಎಷ್ಟು ಅರ್ಥಪೂರ್ಣ ಎನಿಸುತ್ತದೆ!

1960ರ ಶುಭದಿನವೊಂದರಲ್ಲಿ ವಿಶ್ವನಾಥ್ ತೀರ್ಥಹಳ್ಳಿ ಪ್ರಾಥಮಿಕ ಭೂ ಅಡಮಾನ ಸಂಘದ ಸದಸ್ಯರಾದರು. ಅಂದಿನಿಂದಲೇ ಅವರ ಸಮರ್ಥ ನಾಯಕತ್ವ ಗರಿಗೆದರಿಕೊಂಡಿತು, ಸ್ನೇಹಪರತೆ, ಮೃದುಮಾತು, ಜನಪರ ಕಾಳಜಿಯನ್ನು ಮೈದುಂಬಿಸಿಕೊಂಡಿದ್ದ, ವಿಶ್ವನಾಥ್‌ಗೆ ಗ್ರಾಮೀಣ ಜನರ ಕಣ್ಮಣಿಯಾಗಲು ಬಹಳ ಕಾಲ ಹಿಡಿಯಲಿಲ್ಲ. ಬ್ಯಾಂಕಿನ ಸದಸ್ಯರು ವಿಶ್ವನಾಥ ಅವರನ್ನು ಬ್ಯಾಂಕಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ಈ ಆಯ್ಕೆ ಮುಂದೆ ಬಿ.ಎಸ್. ವಿಶ್ವನಾಥ್ ಅವರು ದೇಶ–ವಿದೇಶಗಳಲ್ಲಿ ಸಹಕಾರಿ ಮುಖಂಡರಾಗಿ ಕೀರ್ತಿ, ಪ್ರತಿಷ್ಠೆ, ಗೌರವಗಳನ್ನು ಗಳಿಸಲು ನಾಂದಿ ಹಾಡಿತು. ತೀರ್ಥಹಳ್ಳಿಯ ರಾಮೇಶ್ವರ ಅಡಮಾನ ಸಹಕಾರ ಸಂಘದ ನೇತೃತ್ವ ವಹಿಸಿದ ವಿಶ್ವನಾಥ್ ಹತ್ತು–ಹಲವು ಸಂಘ–ಸಂಸ್ಥೆಗಳ ಆರಂಭಕ್ಕೆ, ಪ್ರಗತಿಗೆ, ಪ್ರತಿಷ್ಠೆಗೆ ಕಾರಣರಾದರು, ಸಾಕ್ಷಿಯಾದರು.

ಬೆಂಗಳೂರಿನಲ್ಲಿ ನಡೆಯುವ ಬೀಚಿ ಸಂಸ್ಮರಣೆ, ಕನ್ನಡ ಸುಗಮ ಸಂಗೀತದ ಪಿತಾಮಹ ಪಿ. ಕಾಳಿಂಗರಾವ್ ಅವರ ಜನ್ಮದಿನ, ಮಿನುಗುತಾರೆ ಕಲ್ಪನ ಅವರ ನೆನಪಿನ ಚಲನಚಿತ್ರೋತ್ಸವ, ಹೆಚ್. ಎಲ್.ಎನ್. ಸಿಂಹ, ಮಾಸ್ಟರ್ ಹಿರಣ್ಣಯ್ಯ ಜನ್ಮದಿನಾಚರಣೆ, ಸ್ಮಿತಾ ಪಾಟೀಲ್ ಚಲನಚಿತ್ರೋತ್ಸವ ಹೀಗೆ ಹತ್ತು–ಹಲವು ಅಪೂರ್ವ ಕಾರ್ಯಕ್ರಮಗಳ ಸೂತ್ರಧಾರ ಬಿ.ಎಸ್. ವಿಶ್ವನಾಥ್, ಸದ್ದುಗದ್ದಲಗಳಿಂದ ಬಲುದೂರವಿರುವುದು ಅವರ ವ್ಯಕ್ತಿತ್ವದ ಇನ್ನೊಂದು ವಿಶೇಷ. ಪ್ರಚಾರ–ಸನ್ಮಾನ– ಪ್ರಶಸ್ತಿಗಳೆಂದರೆ ಅವರಿಗೆ ಅಲರ್ಜಿ, ಎಷ್ಟೋ ಸಭೆ–ಸಮಾರಂಭಗಳ ಸೂತ್ರಧಾರ ಅವರೇ ಆಗಿದ್ದರೂ, ವೇದಿಕೆ ಮೇಲೆ ವಿಜೃಂಭಿಸದಿರುವುದು ಅವರ ಹುಟ್ಟುಗುಣ. ಅಂತಹ ಸಭೆ–ಸಮಾರಂಭಗಳಲ್ಲಿ, ಹಿಂಬದಿ ಸಾಲಿನ ಮೂಲೆಯಲ್ಲೆಲ್ಲೊ, ಸಾಮಾನ್ಯನಂತೆ ಕುಳಿತು, ಮೌನವಾಗಿ, ಕಾರ್ಯಕ್ರಮದ ಯಶಸ್ಸನ್ನು ಕುರಿತು ವಿಶ್ಲೇಷಿಸುವುದು ಅವರ ಜಾಯಮಾನ, ಇದು ಸಮರ್ಥ ನಾಯಕರಲ್ಲಿ ಇರಬೇಕಾದ ಪ್ರಮುಖ ಗುಣವೂ ಹೌದು!



### ಸಹಕಾರ ಕ್ಷೇತ್ರ

ಸಹಕಾರ ಕ್ಷೇತ್ರದಲ್ಲಿ ವಿಶ್ವನಾಥ್ ಅವರ ಸಾಧನೆಯನ್ನು ಗುರುತಿಸಿದ ರಿಜರ್ವ್ ಬ್ಯಾಂಕಿನ ಮಾಜಿ ಡೆಪ್ಯೂಟಿ ಗವರ್ನರ್ ಡಾ॥ ವೆಂಕಟಪ್ಪಯ್ಯ "ವಿಶ್ವನಾಥ್ ಅವರು ಕಟ್ಟಿ ಬೆಳೆಸಿರುವ ಸಂಘ–ಸಂಸ್ಥೆಗಳು ನೂರಾರು ವರ್ಷಗಳ ಕಾಲ ಚಿರಸ್ಥಾಯಿಯಾಗಿ ನೆನಪಿನಲ್ಲಿ ಉಳಿಯುವಂತಹವು" ಎಂದು ಅಭಿಪ್ರಾಯಪಟ್ಟಿದ್ದಾರೆ. ಶ್ರೀಲಂಕಾದ ಡಾ॥ ವೀರಮನ್




"ವಿಶ್ವನಾಥ್ ಭಾರತದ ಅತ್ಯಂತ ಎತ್ತರದ ಸಹಕಾರಿ ಮುಖಂಡ" ಎಂದು ವರ್ಣಿಸಿದರು. "ವಿಶ್ವನಾಥ ವ್ಯಕ್ತಿಯಷ್ಟೆ ಅಲ್ಲ, ಅವರೇ ಒಂದು ಸಂಸ್ಥೆ, ಅವರೇ ಒಂದು ವಿಶ್ವವಿದ್ಯಾಲಯ" ಎಂದವರು ಹಲವಾರು ಗಣ್ಯರು. ಸಹಕಾರ ಕ್ಷೇತ್ರದ ಅವರ ಸಾಧನೆಯ ಮೊದಲ ಹೆಜ್ಜೆಯಾಗಿ ಆರಂಭವಾದದ್ದು, ತೀರ್ಥಹಳ್ಳಿಯ ಶ್ರೀ ರಾಮೇಶ್ವರ ಅಡಮಾನ ಸಹಕಾರ ಸಂಘದಿಂದ. ಅವರ ಚಿಂತನೆ, ದೂರದೃಷ್ಟಿ, ಯೋಜನೆಗಳು ಇಲ್ಲಿಯೇ ಸಾಕಾರಗೊಂಡವು.

ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ, ರಾಜ್ಯ ಕೃಷಿ ಬ್ಯಾಂಕಿನ ಅಧ್ಯಕ್ಷರಾಗಿ ವಿಶ್ವನಾಥ್ ನಿಯೋಗವೊಂದರ ನಾಯಕತ್ವ ವಹಿಸಿ, ವಿಶ್ವ ಬ್ಯಾಂಕ್‌ನೊಂದಿಗೆ ವ್ಯವಹರಿಸಿ, ಅಮೆರಿಕಾದ ವಾಷಿಂಗ್‌ಟನ್‌ಗೆ, ರಾಜ್ಯ ಸರ್ಕಾರದ ಮತ್ತು ರಿಸರ್ವ್ ಬ್ಯಾಂಕಿನ ಅಧಿಕಾರಿಗಳ ನಿಯೋಗ ಕೊಂಡೊಯ್ದು ವಿಶ್ವ ಬ್ಯಾಂಕಿನ ಅಧಿಕಾರಿಗಳ ಮನವೊಲಿಸಿ, ಕರ್ನಾಟಕ ರಾಜ್ಯದ ತುಂಗಭದ್ರ ಎಡದಂಡೆ ಕಾಲುವೆ ನಿರ್ಮಾಣ, ತೋಟಗಾರಿಕೆ ಮತ್ತು ಯಾಂತ್ರೀಕರಣಕ್ಕಾಗಿ ಕೃಷಿಕರಿಗೆ ಸಾಲ ನೀಡಲು, ವಿಶ್ವ ಬ್ಯಾಂಕಿನಿಂದ ಸಾಲ-ಸೌಲಭ್ಯ ದೊರಕಿಸಿಕೊಂಡ ಪ್ರಥಮರು ಎನಿಸಿಕೊಂಡರು. ವಿಶ್ವನಾಥ್ ಅವರ ದಕ್ಷತೆ, ಕಾರ್ಯಕ್ಷಮತೆಯನ್ನು ಕಂಡು ಎಲ್ಲರು "ಭೇಷ್" ಎಂದು ಮೆಚ್ಚುಗೆ ಸೂಚಿಸಿದರು.

## ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ

ಕರ್ನಾಟಕದ ರಾಜ್ಯದಲ್ಲಿ ಅನನ್ಯ ಸಾಧನೆ ಮಾಡಿದ ವಿಶ್ವನಾಥ್, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವುದರಲ್ಲಿ ಯಶಸ್ವಿಯಾದರು. ಈ ರೀತಿಯಾದದ್ದು, ರಾಜ್ಯದ ಸಹಕಾರ ಚಳವಳಿಯ ಭವಿಷ್ಯದಲ್ಲೊಂದು ಮೈಲಿಗಲ್ಲೆಂದೇ ಹೇಳಬಹುದು. ಮುಂಬೈಯಲ್ಲಿರುವ ರಾಷ್ಟ್ರೀಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಮಹಾಮಂಡಳದ ಉಪಾಧ್ಯಕ್ಷರಾಗಿ, ರಾಷ್ಟ್ರ ಮಟ್ಟದ ಸಹಕಾರಿ ರಂಗವನ್ನು ಪ್ರವೇಶಿಸಿದ ವಿಶ್ವನಾಥ್, 1973ರಲ್ಲಿ ಅದರ ಅಧ್ಯಕ್ಷರಾಗಿ ಆಯ್ಕೆಯಾಗಿ ಮುಂದೆ, ಸತತ 18 ವರ್ಷಗಳ ಕಾಲ ಈ ಸ್ಥಾನವನ್ನು ಅಲಂಕರಿಸಿ, ಮಾರ್ಗದರ್ಶನ ಮಾಡುವ ಮೂಲಕ ಹೊಸ ದಾಖಲೆಯನ್ನೇ ಸೃಷ್ಟಿಸಿದರು. ಇದರ ಜೊತೆ, ಜೊತೆಯಲ್ಲೇ ಅವರು ಹತ್ತಾರು ರಾಷ್ಟ್ರೀಯ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದರು. ಪ್ರತಿಷ್ಠಿತ ಕೆನರಾ ಬ್ಯಾಂಕಿನ ನಿರ್ದೇಶಕರಾಗಿ 03 ವರ್ಷ ಸೇವೆ ಸಲ್ಲಿಸಿ, ಹಲವಾರು ಸೌಲಭ್ಯಗಳನ್ನು ಒದಗಿಸಿಕೊಟ್ಟರು.

ವಿಶ್ವನಾಥ್ ಅವರು ಅಂತಾರಾಷ್ಟ್ರೀಯ ರೈಫಿಸನ್ ಯೂನಿಯನ್ (International Raiffeiseen Union – IRU) ಆಡಳಿತ ಮಂಡಳಿಯ ಸದಸ್ಯರಾದದ್ದು, ರೋಬೋ ಬ್ಯಾಂಕ್ ಫೌಂಡೇಶನ್ ನಿಂದ ನೆರವು ಪಡೆಯಲು ಅನುಕೂಲವಾಯಿತು. ಅದರ ನೆರವಿನಿಂದ ರಾಜ್ಯದಲ್ಲಿ ಹಲವಾರು ಪ್ರಮುಖ ಯೋಜನೆಗಳು ಜಾರಿಗೆ ಬರಲು ಸಹಕಾರಿಯಾಯಿತು.

ಅನೇಕ ಬಾರಿ ವಿದೇಶ ಪ್ರವಾಸ ಮಾಡಿ, ಹೊಸ ಹೊಸ ಆವಿಷ್ಕಾರಗಳನ್ನು ಅಧ್ಯಯನ ಮಾಡಿ, ತಮ್ಮ ತಯ್ನಾಡಿನಲ್ಲಿ ಕಾರ್ಯರೂಪಕ್ಕಿಳಿಸಿದ ಬಿ.ಎಸ್. ವಿಶ್ವನಾಥ್, ರಾಜ್ಯ, ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಎತ್ತರದ ವ್ಯಕ್ತಿಯಾಗಿ ಗುರುತಿಸಲ್ಪಟ್ಟು, ಕೃಷಿ, ಸಹಕಾರ, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಪ್ರಾಕಾರಗಳಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿ ಎಲ್ಲಾ ವರ್ಗದ ಜನರ ಪ್ರೀತಿ, ಗೌರವ, ವಿಶ್ವಾಸಗಳಿಗೆ ಪಾತ್ರರಾದ ಅಪರೂಪದ ವ್ಯಕ್ತಿ ಎನಿಸಿದ್ದಾರೆ. ಸ್ನೇಹ, ವಿಶ್ವಾಸ, ಮಾನವೀಯತೆ ಅಂತಹ ಗುಣಗಳಿಗೆ ಹೆಚ್ಚಿನ ಆದ್ಯತೆ ನೀಡುವ ಅವರನ್ನು ಜನತೆ ಪ್ರೀತಿಸುವುದು, ಗೌರವಿಸುವುದು ಸಹಜವೇ ಆಗಿದೆ.

ಪತ್ತಿನ ಮಹಾಮಂಡಳದ ಆಡಳಿತ ಮಂಡಳಿ ಸಭೆಯಲ್ಲಿ ದಿವಂಗತ ಬಿ.ಎಸ್. ವಿಶ್ವನಾಥ್ ಅವರಿಗೆ ಸಂತಾಪ ಸಲ್ಲಿಸಲಾಯಿತು.



ಮಹಾನಗರ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘ ನಿ., ಬೆಂಗಳೂರು ಇದರ 2022–23ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡರವರು, ಮಹಾಪೋಷಕರು ಉಪೇಂದ್ರ ತ್ರಿಪಾಠಿ, ಡಾ॥ ಪುಣ್ಯವತಿ ಸಿ ನಾಗರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಘದ ಸಂಸ್ಥಾಪಕ ನಿರ್ದೇಶಕರಾದ ಶ್ರೀ ಎಸ್.ವಿ. ಮಂಜೇಗೌಡ, ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮುಖ್ಯಕಾರ್ಯ ನಿರ್ವಹಣಾಧಿಕಾರಿಯವರು ಪಾಲ್ಗೊಂಡಿದ್ದರು.



ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘದ ಯಶವಂತಪುರದಲ್ಲಿನ ಸ್ವಂತ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಲು ನಡೆದ ಭೂಮಿ ಪೂಜೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಿ ರಾಜೇಂದ್ರ ಬಾಬು ಉಪಾಧ್ಯಕ್ಷರಾದ ಶ್ರೀ ಪರಮೇಶ್ ಮತ್ತು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಇದರ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡರವರುಗಳು ಭೂಮಿಪೂಜೆಯನ್ನು ನೆರವೇರಿಸಿದರು.

# ಗಾಂಧಿ ಎಂಬ ಅಹಿಂಸಾವಾದಿಗೆ ಜಾಗತಿಕ ನಮನ

ಭಾರತದ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ದೆಹಲಿಯಲ್ಲಿ ಯಶಸ್ವಿಯಾಗಿ ನಡೆದ ಜಿ 20 ಶೃಂಗಸಭೆ ಭಾರತದ ನಾಯಕತ್ವದ ಪರಿಚಯ ಇಡೀ ಜಗತ್ತಿಗೆ ಇನ್ನೊಮ್ಮೆ ಸಾಧರಪಡಿಸಿತು.

ಜಿ20 ಶೃಂಗ ಸಭೆಗೆ ದೆಹಲಿಗೆ ಆಗಮಿಸಿದ ಜಾಗತಿಕ ನಾಯಕರು ಅಪರೂಪದ ಒಂದು ಐತಿಹಾಸಿಕ ಘಟನೆಗೆ ಸಾಕ್ಷಿಯಾದರು.

ಅಮೇರಿಕಾ, ಇಂಗ್ಲೆಂಡ್, ಕೆನಡಾ, ಆಸ್ಟ್ರೇಲಿಯಾ, ಇಂಡೋನೇಷ್ಯಾ, ಜರ್ಮನಿ, ರಷ್ಯಾ, ಸೌದಿ ಅರೇಬಿಯಾ, ಇಟಲಿ, ಚೀನಾ, ಟರ್ಕಿ, ಜಪಾನ್, ಫ್ರಾನ್ಸ್, ಅರ್ಜೆಂಟೀನಾ ಹಾಗೂ ದಕ್ಷಿಣ ಕೋರಿಯಾ ನಾಯಕರು ಒಗ್ಗಟ್ಟಿನಲ್ಲಿ ರಾಜ್ ಘಾಟ್ ಗೆ ತೆರಳಿ ರಾಷ್ಟ್ರಪಿತ ಮಹತ್ಮಾಗಾಂಧಿಯವರ ಸಮಾಧಿಗೆ ಸಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಮಹಾತ್ಮಾ ಗಾಂಧಿಯವರ ಅಹಿಂಸಾ ತತ್ವ ಹಾಗೂ ಅವರ ಆದರ್ಶ ಜಗತ್ತಿಗೆ ಇಂದು ಹೆಚ್ಚು ಪ್ರಸ್ತುತ ಇದೆ ಎಂಬ ಸಂದೇಶ ಸಾರಿದರು.

ದಿನೇ ದಿನೇ ಜಗತ್ತಿನ ಮೂಲೆ ಮೂಲೆಗಳಲ್ಲಿ ಹೆಚ್ಚುತ್ತಿರುವ ಆಕ್ರಮಣಶೀಲತೆ, ಯುದ್ಧೋನ್ಮಾದ, ಭಯೋತ್ಪಾದನೆ, ಅಧರ್ಮಿಯ ರೀತಿಯಲ್ಲಿ ಆಕ್ರಮಣ ಮಾಡುತ್ತಿರುವ ಕೈಗಾರಿಕಾ ಮತ್ತು ಶಸ್ತ್ರಾಸ್ತ್ರ ಸ್ಪರ್ಧೆಗಳು ಮಾನವ ಕುಲಕ್ಕೆ ದೊಡ್ಡ ಸವಾಲಿನ ಪ್ರಶ್ನೆಯಾಗಿದೆ.





ಮಹಾತ್ಮಾ ಗಾಂಧಿಯವರ ಅಹಿಂಸೆ, ತ್ಯಾಗ, ಸ್ವದೇಶಿ ಆಂದೋಲಗಳಿಂದ ಈ ಎಲ್ಲಾ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂಬುದು ಜಾಗತಿಕ ನಾಯಕರ ಅರವಿಗೆ ಬಂದ ಹಿನ್ನಲೆಯಲ್ಲಿ ಗಾಂಧಿ ತತ್ವಗಳಿಗೆ ಈ ಹಿಂದೆಂದಿಗಿಂತಲೂ ಇಂದು ಹೆಚ್ಚು ಮಹತ್ವ ಬಂದಿದೆ.

ಆ ಹಿನ್ನೆಲೆಯಲ್ಲಿ ದಹಲಿಗೆ ಬಂದ ಜಾಗತಿಕ ನಾಯಕರು ತಮ್ಮ ತಮ್ಮ ನಡುವಿನ ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಾಗಿ ಶಾಂತಿ ದೂತನ ಸಮಾಧಿಗೆ ನಮನ ಸಲ್ಲಿಸಿದರು. ಮಹಾತ್ಮ ಗಾಂಧಿಯವರ ಅಹಿಂಸೆ ಮತ್ತು ಶಾಂತಿ ಮಂತ್ರದಿಂದ ಮಾತ್ರ ಜಗತ್ತಿನ ಮಾನವ ಕುಲದ ಏಳಿಗೆ ಸಾಧ್ಯ ಎಂದ ಸಂದೇಶ ನೀಡಿದರು.

**ಭಾರತೀಯ ರಾಷ್ಟ್ರೀಯ ಚಳವಳಿಯಲ್ಲಿ ಮಹಾತ್ಮ ಗಾಂಧಿಯವರ ಕೊಡುಗೆ :** 1919 ರಿಂದ 1947 ರವರೆಗೆ, ರಾಷ್ಟ್ರೀಯ ಚಳವಳಿಯಲ್ಲಿ ಗಾಂಧಿ ಪ್ರಮುಖ ಪಾತ್ರ ವಹಿಸಿದರು. ಸತ್ಯಾಗ್ರಹವನ್ನು ಮೊದಲು ಗಾಂಧೀಜಿ ಬಿಹಾರದ ಚಂಪಾರಣ್ಯದಲ್ಲಿ ಬಳಸಿದರು. ಚಂಪಾರಣ್ ಮತ್ತು ಖೇರಾದಲ್ಲಿ ರೈತ ಚಳವಳಿ ಮತ್ತು ಅಹಮದಾಬಾದ್‌ನಲ್ಲಿ ಕಾರ್ಮಿಕ ಚಳವಳಿಗೆ ನಾಯಕತ್ವವನ್ನು ನೀಡುವ ಮೂಲಕ ಗಾಂಧಿಯವರು ಪ್ರಭಾವಿ ಹೋರಾಟಗಾರರಾಗಿ ಹೊರಹೊಮ್ಮಿದರು.

ಫೆಬ್ರವರಿ 1919ರಲ್ಲಿ, ಅವರು ಬ್ರಿಟಿಷರು ಮಾಡಿದ ರೌಲಟ್ ಕಾಯಿದೆಯ ವಿರೋಧಿಸಿದರು, ಅದರ ಅಡಿಯಲ್ಲಿ ಯಾವುದೇ ವ್ಯಕ್ತಿಯನ್ನು ವಿಚಾರಣೆಯಿಲ್ಲದೆ ಜೈಲಿಗೆ ಕಳುಹಿಸುವ ಅವಕಾಶವಿತ್ತು. ಆಗ ಗಾಂಧೀಜಿ ಸತ್ಯಾಗ್ರಹ ಚಳವಳಿಯನ್ನು ಘೋಷಿಸಿದರು. ಇದು 1919 ರಲ್ಲಿ ಬ್ರಿಟಿಷ್ ಆಡಳಿತವನ್ನು ನಡುಗಿಸಿತು.

ಈ ಯಶಸ್ಸಿನಿಂದ ಪ್ರೇರಿತರಾದ ಮಹಾತ್ಮ ಗಾಂಧಿಯವರು ಸತ್ಯಾಗ್ರಹ ಮತ್ತು ಅಹಿಂಸೆಯ ಮಂತ್ರದ ಮೂಲಕ ಭಾರತದ ಸ್ವಾತಂತ್ರ್ಯಕ್ಕಾಗಿ ಇತರ ಅಭಿಯಾನಗಳಾದ 'ಅಸಹಕಾರ ಚಳುವಳಿ', 'ಅವಿಧೇಯ ಚಳುವಳಿ', 'ದಂಡಿ ಯಾತ್ರೆ' ಮತ್ತು 'ಭಾರತ ಬಿಟ್ಟು ತೊಲಗಿ' ಮುಂತಾದ





ಚಳವಳಿಯನ್ನು ಮುಂದುವರೆಸಿದರು. ಮೋಹನ್ದಾಸ್ ಕರಮಚಂದ್ ಗಾಂಧಿ ಅವರು ಭಾರತ ಮತ್ತು ಭಾರತೀಯ ಸ್ವಾತಂತ್ರ್ಯ ಚಳವಳಿಯ ಪ್ರಮುಖ ರಾಜಕೀಯ ಮತ್ತು ಆಧ್ಯಾತ್ಮಿಕ ನಾಯಕರಾಗಿದ್ದರು. ರಾಜಕೀಯ ಮತ್ತು ಸಾಮಾಜಿಕ ಪ್ರಗತಿಯನ್ನು ಸಾಧಿಸಲು ಅಹಿಂಸಾತ್ಮಕ ಪ್ರತಿಭಟನೆಯ ಸಿದ್ಧಾಂತಕ್ಕಾಗಿ ಅವರು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದರು. ಮಹಾತ್ಮಾ ಗಾಂಧೀಜಿಯವರಿಗೂ ಮುಂಚೆಯೇ ಜನರು ಶಾಂತಿ ಮತ್ತು ಅಹಿಂಸೆಯ ಬಗ್ಗೆ ತಿಳಿದಿದ್ದರು, ಆದರೆ ಅವರು ಸತ್ಯಾಗ್ರಹ, ಶಾಂತಿ ಮತ್ತು ಅಹಿಂಸೆಯ ಮಾರ್ಗಗಳನ್ನು ಅನುಸರಿಸಿ ಭಾರತವನ್ನು ತೊರೆಯಲು ಬ್ರಿಟಿಷರನ್ನು ಒತ್ತಾಯಿಸಿದ ರೀತಿ, ಜಗತ್ತಿನ ಇತಿಹಾಸದಲ್ಲಿ ಬೇರೆ ಯಾವುದೇ ಉದಾಹರಣೆ ಕಂಡುಬರುವುದಿಲ್ಲ. ಆದ್ದರಿಂದಲೇ ವಿಶ್ವಸಂಸ್ಥೆ ಕೂಡ 2007ರಿಂದ ಗಾಂಧಿ ಜಯಂತಿಯನ್ನು 'ವಿಶ್ವ ಅಹಿಂಸಾ ದಿನ' ಎಂದು ಆಚರಿಸಲು ನಿರ್ಧರಿಸಿತು.

ಆದರೆ ಇಂದು ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಹೋರಾಟಕ್ಕಾಗಿ ಮಾಡಿದ ತ್ಯಾಗ, ಬಲಿದಾನ, ಅಹಿಂಸಾತ್ಮಕ ಚಳವಳಿ ಹಾಗೂ ಉಪವಾಸ ಸತ್ಯಾಗ್ರಹವನ್ನು ಅವಹೇಳನ ಮಾಡುವ ವ್ಯವಸ್ಥಿತ ಅಪಪ್ರಚಾರ ನಡೆಯುತ್ತಿದ್ದು ಆ ಮೂಲಕ ಇಂದಿನ ಯುವ ಸಮುದಾಯದಲ್ಲಿ ಮಹಾತ್ಮನ ಕುರಿತು ತಪ್ಪು ಅಭಿಪ್ರಾಯ ಮೂಡಿಸುವ ಸಂಚು ನಡೆಯುತ್ತಿದೆ.

**ನಾಲ್ಕು ಖಂಡ, 12 ದೇಶಗಳಿಗೆ ಸ್ಫೂರ್ತಿ :** ಗಾಂಧೀಜಿ ಅವರ ಶಾಂತಿಯ ಹೋರಾಟವು ಬರೀ ಭಾರತಕ್ಕಷ್ಟೇ ನೆರವಾಗಲಿಲ್ಲ. ದಕ್ಷಿಣ ಆಫ್ರಿಕಾ ಸೇರಿದಂತೆ ಅನೇಕ ದೇಶಗಳು ಗಾಂಧೀಜಿ ಅವರ ಶಾಂತಿ ಹೋರಾಟದ ನೆರವಿನಿಂದ ಸ್ವಾತಂತ್ರ್ಯ ಸಂಪಾದಿಸಿದವು. 4 ಖಂಡಗಳ 12 ದೇಶಗಳಲ್ಲಿ ಗಾಂಧೀಜಿ ಅವರ ಶಾಂತಿ ಸ್ವರೂಪದ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೊತ್ತಿಕೊಂಡಿತು. ಈ ದೇಶಗಳು ಇಂದಿಗೂ ಅಹಿಂಸಾ ತತ್ವದ ಮೂಲಕ ಸ್ವಾತಂತ್ರ್ಯದ ಮಾರ್ಗ ಹಾಕಿ ಕೊಟ್ಟ ಗಾಂಧೀಜಿ ಅವರನ್ನು ನೆನೆಯುತ್ತವೆ.

ಅಂತಿಮ ಮೆರವಣಿಗೆ 8 ಕಿ.ಮೀ.

1948ರ ಜ.30ರಂದು ಹಂತಕ ನಾಥೂರಾಮ್ ಗೋಡ್ಸೆ ಗುಂಡಿಗೆ ಬಲಿಯಾದ ಗಾಂಧೀ ಅವರ ಅಂತ್ಯಕ್ರಿಯೆಯನ್ನು ದಿಲ್ಲಿಯ ರಾಜಘಾಟ್ನಲ್ಲಿ ನೆರವೇರಿಸಲಾಯಿತು. ಗಾಂಧೀಜಿ ಅವರ ಹತ್ಯೆಯ ಸುದ್ದಿ ದೇಶಾದ್ಯಂತ ಕಾಳ್ಗಿಚ್ಚಿನಂತೆ ಹಬ್ಬಿತು. ದೇಶದ ಮೂಲೆಮೂಲೆಯ ಜನ ದಿಲ್ಲಿಯತ್ತ ಧಾವಿಸಿ ಅಗಲಿದ ಸ್ವಾತಂತ್ರ್ಯ ಸೇನಾನಿಗೆ ಅಂತಿಮ ನಮನ ಸಲ್ಲಿಸಿದರು. ಮಹಾತ್ಮಾ ಅಂತಿಮ ಯಾತ್ರೆಗೆ ಸುಮಾರು 8 ಕಿ.ಮೀ.ವರೆಗೆ ಜನಸಾಗರ ಚಾಚಿಕೊಂಡಿತ್ತು!

ಬ್ರಿಟನ್ ಸಹಿತ ನೂರಾರು ದೇಶಗಳಲ್ಲಿ ಗಾಂಧೀಜಿ ಅಂಚೆಚೀಟಿ : ಗಾಂಧೀಜಿ ಅವರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ್ದು ಬ್ರಿಟಿಷರ ವಿರುದ್ಧ. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳವಳಿಯ ಹರಿಕಾರರು ಅವರು. ಇಂತಹ ಬ್ರಿಟಿಷರು ಕಾಲಕ್ರಮೇಣ ಗಾಂಧೀಜಿ ಬಗ್ಗೆ ಮೃದು ಧೋರಣೆ ತಾಳಿದರು. ಗಾಂಧೀಜಿ ಅವರ ಸಾವಿನ 21 ವರ್ಷಗಳ ತರುವಾಯ ಬ್ರಿಟನ್ನಲ್ಲಿ ಅವರ ಗೌರವಾರ್ಥ ಅಂಚೆ ಚೀಟಿಯೊಂದನ್ನು ಹೊರತರಲಾಯಿತು.

ಅದೇ ರೀತಿ ಅಮೇರಿಕಾ, ಆಫ್ರಿಕಾ ಸಹಿತ ಜಗತ್ತಿ ನೂರಾರು ದೇಶಗಳು ಮಾಹಾತ್ಮಾಗಾಂಧಿಯ ಸ್ಮರಣಾರ್ಥ ಅಂಚೆ ಚೀಟಿ ಹೊರತರುವ ಮೂಲಕ ಅಹಿಂಸೆಯ ಹರಿಕಾರನಿಗೆ ಗೌರವ ಸಲ್ಲಿಸಿವೆ.

**ಜಗತಿನಾದ್ಯಂತ ಗಾಂಧಿ ಪ್ರತಿಮೆಗಳು :** ಭಾರತ ಪ್ರಮುಖ ನಗರ ಹಾಗೂ ಹಳ್ಳಿ ಪ್ರದೇಶಗಳಲ್ಲಿ ಮಹಾತ್ಮಾಗಾಂಧಿಯವರ ಪ್ರತಿಮೆಬಿರುವುದು ಸರ್ವ ಸಾಮಾನ್ಯ ಅದೇ ರೀತಿ ಅಮೇರಿಕಾ, ಇಂಗ್ಲೆಂಡ್, ಆಸ್ಟ್ರೇಲಿಯಾ, ಜರ್ಮನ, ರಷ್ಯಾ, ಆಫ್ರಿಕಾ ಸಹಿತ ಬಹುಪಾಲು ದೇಶಗಳು ಗಾಂಧಿಯವರ ಪ್ರತಿಮೆ ಸ್ಥಾಪಿಸುವ ಮೂಲಕ ಅವರು ಮಾನವ ಕುಲಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿವೆ.

**ಮಲೇಷಿಯಾದಲ್ಲಿ ಗಾಂಧಿ ಹೆಸರಿನ ರೆಸ್ಟೋರೆಂಟ್ :** ಮಲೇಷಿಯಾದ ರಾಜಧಾನಿ ಕೌಲಾಲಂಪುರಂನಲ್ಲಿ ಮಹಾತ್ಮಾಗಾಂಧಿ ಹೆಸರಿನ ರೆಸ್ಟೋರೆಂಟ್ ಇದ್ದು ಇಲ್ಲಿ ಸಂಪೂರ್ಣವಾಗಿ ಭಾರತೀಯ ಶೈಲಿಯ ಸಸ್ಯಹಾರಿ ಆಹಾರವನ್ನು ಪೂರೈಸಲಾಗುತ್ತದೆ.

**– ಮಂಜುನಾಥ್ ನಾಯ್ಕ್**
**ಹಿರಿಯ ಪತ್ರಕರ್ತರು, ಬೆಂಗಳೂರು.**

# ಕನ್ನಡಿಗರ ಹೆಮ್ಮೆ : ನಾಡಹಬ್ಬ ದಸರಾ



ನಾಡಹಬ್ಬ ಎಂದೇ ಖ್ಯಾತಿಗಳಿಸಿರುವ ಮೈಸೂರು ದಸರಾವನ್ನು ಹತ್ತು ದಿನಗಳ ಕಾಲ ಸುದೀರ್ಘ ಹಬ್ಬವಾಗಿ ಆಚರಿಸುತ್ತಾರೆ ಕರ್ನಾಟಕ, ಭಾರತ ಮಾತ್ರವಲ್ಲದೇ ದಸರಾ ವೈಭವವನ್ನು ಕಣ್ತುಂಬಿಕೊಳ್ಳಲು ವಿದೇಶಿಗರೂ ಲಕ್ಷಾಂತರ ಸಂಖ್ಯೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸುತ್ತಾರೆ. ಆದರೆ ಈ ಬಾರಿ ಮುಂಗಾರು ಮಳೆ ಕೈಕೊಟ್ಟು ರಾಜ್ಯದಾದ್ಯಂತ ಬರದ ಛಾಯೆ ಕವಿದಿರುವುದರಿಂದ ನಾಡಹಬ್ಬ ದಸರಾವನ್ನು ಸರಳವಾಗಿ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ನಿರ್ಧರಿಸಿದೆ.

ವಾಡಿಕೆಯಂತೆ ಮುಂಗಾರು ಮಳೆ ಆಗದಿರುವುದರಿಂದ ಕೃಷ್ಣರಾಜಸಾಗರ ಜಲಾಶಯದಲ್ಲಿ ನಿಗದಿಯಂತೆ ನೀರು ಶೇಖರಣೆ ಆಗದೆ ಇರುವುದರಿಂದ ಈ ಭಾಗದ ರೈತರು ಮುಖದಲ್ಲಿ ನಿರಾಶೆಯ ಕಾರ್ಮೋಡ ಕವಿದಿದೆ. ಈ ನಡುವೆ ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶದಂತೆ ತಮಿಳುನಾಡಿಗೆ ನೀರುಬಿಟ್ಟ ಹಿನ್ನಲೆಯಲ್ಲಿ ಸರ್ಕಾರ ವಿರುದ್ಧ ರೈತರ ಆಕ್ರೋಶ ಮುಗಿಲು ಮುಟ್ಟಿದೆ.

ಒಂದು ಕಾಲಘಟ್ಟದಲ್ಲಿ ಆಳರಸರ ಮಹೋತ್ಸವವಾಗಿ ಆಚರಿಸಲಾಗುತ್ತಿದ್ದ ದಸರಾ ಇಂದು ಸರಕಾರವೇ ಅದನ್ನು ನಾಡಹಬ್ಬ ವೆಂದು ಅಧಿಕೃತವಾಗಿ ಘೋಷಿಸಿ ಸಂಪೂರ್ಣವಾಗಿ ಸರ್ಕಾರಿ ವೆಚ್ಚದಲ್ಲಿ ಹತ್ತು ದಿನಗಳ ಕಾಲ ಧಾರ್ಮಿಕ ಮತ್ತು ಸಾಂಸ್ಕೃತಿಕ ವೈಭವದಿಂದ ಆಚರಿಸುತ್ತದೆ. ದಸರಾ ಹಬ್ಬ ಆಚರಣೆ ಮೂಲಕ ಕನ್ನಡ ನಾಡಿನ ಕಲೆ, ಸಂಸ್ಕೃತಿ, ಆಚಾರ, ವಿಚಾರ ಆಹಾರ, ವಿಹಾರ ಸಹಿತ ಸಂಪೂರ್ಣವಾಗಿ ಕರ್ನಾಟಕವನ್ನು ದೇಶ ವಿದೇಶಗಳ ಪ್ರವಾಸಿಗರಿಗೆ ಪರಿಚಯಿಸುವ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಾಗುತ್ತದೆ.

ಕನ್ನಡ ನಾಡು, ನುಡಿ,ನೆಲ, ಜಲ, ಕಲೆ, ಸಂಸ್ಕೃತಿಯ ಕುರಿತು ವಿಶೇಷ ಕಾಳಜಿ ಹೊಂದಿರುವ ಹಿರಿಯ ಚಲನಚಿತ್ರ ಸಂಗೀತ ನಿರ್ದೇಶಕ ಹಾಗೂ ಚಿತ್ರ ಸಾಹಿತಿ ನಾಡಿನ ಸಾಂಸ್ಕೃತಿಕ ರಾಯಭಾರಿ ಹಂಸಲೇಖ ಅವರ ಅಮೃತ ಹಸ್ತದಿಂದ ಈ ಬಾರಿಯ ನಾಡಹಬ್ಬ ದಸರಾ ಉತ್ಸವಕ್ಕೆ ಚಾಲನೆ. ಇದು ತಮಗೆ ಜೀವಿತಾವಧಿಯಲ್ಲಿ ಸಿಕ್ಕ ಅತಿ ದೊಡ್ಡ ಗೌರವ ಎಂದು ಹಂಸಲೇಖ ಮುಕ್ತ ಮನಸ್ಸಿನಿಂದ ಅಭಿಪ್ರಾಯ ಹಂಚಿಕೊಂಡಿದ್ದಾರೆ. ತಮ್ಮ ಜೀವ ಇರುವ ತನಕ ಕನ್ನಡ ನಾಡು ನುಡಿಯ ಸೇವೆ ಮಾಡುವುದಾಗಿ ಮನಬಿಚ್ಚಿ ಹೇಳಿದ್ದಾರೆ.

ವರ್ಷಪೂರ್ತಿ ದಸರಾ ಹಬ್ಬಕ್ಕಾಗಿ ತಯಾರಿ ನಡೆಸುವ ಮೈಸೂರು ಭಾಗದ ಹೋಟೇಲ್ ಉದ್ಯಮಿಗಳು, ವ್ಯಾಪಾರಿಗಳು ಸಹಿತ ವಿವಿಧ ಕ್ಷೇತ್ರದ ಜನರು ದಸರಾಕ್ಕೆ ಆಗಮಿಸುವ ಪ್ರವಾಸಿಗರ ಸಹಾಯದಿಂದ ತಮ್ಮ ವರ್ಷದ ದುಡಿಮೆಯನ್ನು ಮಾಡಿಕೊಳ್ಳುತ್ತಾರೆ. ಆದರೆ ಬರದ ನೆಪ ಮಾಡಿಕೊಂಡು ಸರ್ಕಾರ ಸರಳ ದಸರಾ ಆಚರಣೆ ಮಾಡುತ್ತಿರುವ ಹಿನ್ನಲೆಯಲ್ಲಿ ಈ ಸಮುದಾಯದ ವರ್ಷದ

ದುಡಿಮೆಗೆ ಕತ್ತರಿ ಬಿದ್ದಂತಾಗುತ್ತದೆ. ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಕ್ಕಿಂತಲೂ ಹೆಚ್ಚಿನ ಇತಿಹಾಸವಿದೆ. ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲೇ ಇಷ್ಟೊಂದು ಕಾಲ ನಡೆದು ಬಂದಿರುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ. ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿಯ ಆರಾಧನೆಯೊಂದಿಗೆ ಆರಂಭವಾಗುವ ನವರಾತ್ರಿ ಹಾಗೂ ಹತ್ತನೇ ದಿನದಂದು ನಡೆಯುವ ವೈಭವದ ವಿಜಯ ದಶಮಿಯ ಮೈಸೂರು ದಸರಾ ಮಹೋತ್ಸವಕ್ಕೆ ಅದರದೇ ಆದ ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಇದೆ.

**ಮೈಸೂರು ದಸರಾ ಆಚರಣೆಯ ಇತಿಹಾಸ :** ಕರ್ನಾಟಕ ಇತಿಹಾಸದಲ್ಲಿ ಸುವರ್ಣಯುಗವನ್ನು ಸೃಷ್ಟಿಸಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿ ವೈಭವದಿಂದ ಮೆರೆದವರು ವಿಜಯನಗರ ಅರಸರು. ಇವರ ಕಾಲದಿಂದ ಆರಂಭಗೊಂಡು ಆಚರಿಸಲ್ಪಡುತ್ತಿದ್ದ ನವರಾತ್ರಿ ಉತ್ಸವದ ವಿಜಯ ದಶಮಿಯ ದಸರಾ ಹಬ್ಬಕ್ಕೆ ಹೆಚ್ಚಿನ ಕಳೆ ತಂದುಕೊಟ್ಟವರು ವಿಜಯನಗರ ಅರಸರಲ್ಲೇ ಅತ್ಯಂತ ಪ್ರಖ್ಯಾತರಾಗಿದ್ದ ಶ್ರೀಕೃಷ್ಣದೇವರಾಯ. ಆ ಕಾಲದಲ್ಲಿ ಹಂಪೆಯಲ್ಲಿರುವ ಮಹಾನವಮಿ ದಿಬ್ಬ ಮತ್ತು ವಿಜಯ ವಿಠಲ ದೇವಾಲಯಗಳು ದಸರಾ ಮಹೋತ್ಸವದ ಕೇಂದ್ರಗಳಾಗಿದ್ದವು.

ವಿಜಯನಗರ ಸಾಮ್ರಾಜ್ಯದ ಶಕ್ತಿ ಸಾಮರ್ಥ್ಯ, ಸಂಪತ್ತು, ವೈಭವ – ವೈಭೋಗ, ವೀರತ್ವ – ಧೀರತ್ವ, ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಸಂಸ್ಕೃತಿ, ಶ್ರೀಮಂತಿಕೆಯನ್ನು ತೋರ್ಪಡಿಸಿಕೊಳ್ಳುವ ಹಿನ್ನಲೆಯಲ್ಲಿ ಬಹು ಮುಖ್ಯವಾಗಿ ವಿಜಯದ ದ್ಯೋತಕವಾಗಿ ವಿಜಯದಶಮಿಯ ದಸರಾ ಮಹೋತ್ಸವವನ್ನು ವಿಜಯ ನಗರ ಅರಸರು ಆಚರಿಸುತ್ತಿದ್ದರು.

ಈ ಸಂಭ್ರಮದ ಉತ್ಸವವನ್ನು ವೀಕ್ಷಿಸಲು ದೇಶ– ವಿದೇಶಗಳ ಗಣ್ಯರು, ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ ಉಲ್ಲೇಖಗಳಿವೆ. 11ನೇ ಶತಮಾನದಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ವಿದೇಶೀ ಪ್ರವಾಸಿಗರಾದ ಅಲ್ಬೆರೋನಿ, 15–16ನೇ ಶತಮಾನದಲ್ಲಿ ಬಂದಿದ್ದ ಪರ್ಷಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲಕೊಂಟಿ, ಪೋರ್ಚುಗೀಸಿನ ಡೊಮಿಂಗೋಪಾಯಸ್ ಮೊದಲಾದವರು ವಿಜಯನಗರ ಸಾಮ್ರಾಜ್ಯದ ವೈಭವೋಪೇತವಾದ ಈ ಮಹೋತ್ಸವವನ್ನು ಕೊಂಡಾಡಿ, ತಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ.

ವಿಜಯದಶಮಿ ದಸರಾ ಮಹೋತ್ಸವವನ್ನು ವಿಜಯನಗರ ಸಾಮ್ರಾಜ್ಯ ಪತನದ ನಂತರ ಮುಂದುವರಿಸಿಕೊಂಡು ಬಂದವರು ಯದು ವಂಶದ ಮೈಸೂರು ಒಡೆಯರು. ಯದುವಂಶದ ಆಳ್ವಿಕೆಯ 9ನೇ ಅರಸರಾದ ರಾಜ ಒಡೆಯರು (1578–1617) ತಮ್ಮ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ 1610ರಲ್ಲಿ ವಿಜಯನಗರದ ರಾಜಪರಂಪರೆಯಂತೆ ನವರಾತ್ರಿ ಉತ್ಸವದಂದು ದಸರಾ ಮಹೋತ್ಸವವನ್ನು ಆರಂಭಿಸಿದರು.

ವಿಜಯನಗರ ಅರಸರ ಸಂಪ್ರದಾಯದಂತೆ ದಸರಾಗೆ ಸಂಬಂಧಿಸಿದ ಎಲ್ಲಾ ರೀತಿಯ ಶಾಸ್ತ್ರ ಹಾಗೂ ವಿಧಿ ವಿಧಾನಗಳನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಯದುವಂಶಸ್ಥರೂ ಅನುಸರಿಕೊಂಡು ಬಂದರು. ಈ ಪ್ರಕಾರದಂತೆ ಅಶ್ವಯುಜ ಶುದ್ಧ ಪ್ರಥಮೆಯಂದು ನವರಾತ್ರಿ ಉತ್ಸವ ಆರಂಭವಾಗಿ ಮಹಾನವಮಿಯ ಕಡೇ ದಿನದವರೆಗೂ ಪ್ರತಿನಿತ್ಯ ಪೂಜೆ ಪುರಸ್ಕಾರ, ಪೂರ್ವಾಹ್ನ ಮತ್ತು ಮಧ್ಯಾಹ್ನ ಸಿಂಹಾಸನಾರೋಹಣ, ಒಡ್ಡೋಲಗ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕೆಂದು ವಿಧೇಕವನ್ನೇ ಮಾಡಿ ದಸರಾ ಹಬ್ಬವನ್ನು ಆಚರಣೆಗೆ ತಂದರು. 1799ರವರೆಗೂ ಅಂದಿನ ಮೈಸೂರು ರಾಜ್ಯದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲೇ ದಸರಾ ನಡೆಯುತ್ತಿತ್ತು.

ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಯ ನಂತರ ಮತ್ತೆ ಅಧಿಕಾರಕ್ಕೆ ಬಂದ ಯದುಕುಲತಿಲಕ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ (1799–1868)ಕಾಲದಲ್ಲಿ ರಾಜ್ಯದ ರಾಜಧಾನಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗವಾಯಿತು. ಅಲ್ಲಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅತೀವ ಕಾಳಜಿಯಿಂದ ಮತ್ತಷ್ಟು ವಿಜೃಂಭಣೆಯಿಂದ 1800ರಲ್ಲಿ ಮೈಸೂರಿನಲ್ಲಿ ದಸರಾ ಪ್ರಾರಂಭವಾಗಿ "ಮೈಸೂರು ದಸರಾ" ಎಂದು ವಿಶ್ವವಿಖ್ಯಾತಿಯನ್ನು ಪಡೆಯಿತು.

ನಾಡ ದೇವತೆ, ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಯನ್ನು ಒಂಬತ್ತು ದಿನಗಳ ಕಾಲ ವಿವಿಧ ಅಲಂಕಾರದಲ್ಲಿ ಪೂಜಿಸುವ ಮೂಲಕ ನಾಡಿನ ಎಲ್ಲಾ ಸಂಕಷ್ಟಗಳನ್ನು ದೂರ ಮಾಡಿ ಮಳೆ, ಬೆಳೆ ಚೆನ್ನಾಗಿ ಬಂದು ನಾಡಿನ ಜನತೆ ಸುಖ, ಶಾಂತಿ, ಸಮೃದ್ಧಿ ಹಾಗೂ ಸೌಹಾರ್ದಯುತವಾಗಿ ಬದುಕು ನಡೆಸುವಂತೆ ಆಶೀರ್ವದಿಸು ಎಂದು ಪ್ರಾರ್ಥಿಸಲಾಗುತ್ತದೆ.

ಮೈಸೂರು ದಸರಾ ಆಚರಣೆಯಿಂದ ನಾಡಿನ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗುವುದರ ಜೊತೆಗೆ ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಚಟುವಟಿಕೆಗಳ ಚೇತರಿಕೆಗೂ ಅನುಕೂಲ ಕಲ್ಪಿಸುತ್ತದೆ ಆ ಹಿನ್ನಲೆಯನ್ನು ದೇಶ ವಿದೇಶಗಳಲ್ಲಿ ಖ್ಯಾತಿ ಪಡೆದ ಮೈಸೂರು ದಸಾರ ಉತ್ಸವವನ್ನು ರಾಜ್ಯದ ಪ್ರವಾಸೋದ್ಯಮ ಮತ್ತು ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಜಾಣತನದ ನಿರ್ಧಾರ ಎನಿಸುವುದಿಲ್ಲ ಆ ಹಿನ್ನಲೆಯಲ್ಲಿ ನಾಡ ಹಬ್ಬ ದಸರಾ ಆಚರಣೆಗೆ ಯಾವುದೇ ರೀತಿಯಲ್ಲಿ ಚ್ಯುತಿ ಬರದಂತೆ ಕಾರ್ಯಕ್ರಮ ರೂಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ.

**– ಸವಿತಾ ನಾಯ್ಕ್ ಬೆಂಗಳೂರು.**



# ಆಹಾರ ಭದ್ರತೆ - ಸಹಕಾರ ಚಳುವಳಿ : ಒಂದು ವಿಶ್ಲೇಷಣೆ

... ಹಿಂದಿನ ಸಂಚಿಕೆಯಿಂದ



**ಶಶಿಧರ ಎಲೆ**
ಸಹಕಾರ ಸಂಘಗಳ ಅಪರ ನಿಬಂಧಕರು
(ನಿವೃತ್ತ), ಬೆಂಗಳೂರು

**ಮಣ್ಣು ಪರೀಕ್ಷೆ :** ಮಣ್ಣಿನ ಪರೀಕ್ಷೆ ಬಹಳ ಮುಖ್ಯವಾದ ಅಂಶ. ಇದರಿಂದ ಸರಬರಾಜು ಮಾಡಬೇಕಾದ ಗೊಬ್ಬರ, ಖನಿಜಾಂಶಗಳ ನಿಖರ ಲೆಕ್ಕ ಸಿಗುತ್ತದೆ. ಅದರಂತೆ ರಸಗೊಬ್ಬರ ಪ್ರಮಾಣ ನಿರ್ಧರಿಸಿ ಸರಬರಾಜು ಮಾಡಲು ಸಾಧ್ಯವಾಗುತ್ತದೆ. ಮಣ್ಣಿನಲ್ಲಿನ ಇಂಗಾಲ: ಸಾರಜನಕ (Carbon: Nitrogen) ಅನುಪಾತ 8:1 ರಿಂದ 15:1 ರವರ ನಡುವಿಗೆ ಇರುವಂತೆ ನೋಡಿಕೊಳ್ಳಬೇಕು. ಇದರಿಂದ ಮಣ್ಣಿಗೆ ಪೌಷ್ಟಿಕಾಂಶವನ್ನು ಸಮತೋಲನವಾಗಿ ಮತ್ತು ಅಗತ್ಯತೆಗೆ ತಕ್ಕಂತೆ ಒದಗಸಬಹುದು.

**ಸಹಕಾರದ ಪ್ರಾಮುಖ್ಯತೆ :** ಈ ಮೇಲಿನ ರೂಢಿಗಳನ್ನು (ಕೊಯ್ಲು ಪೂರ್ವ) ಮತ್ತು ಕೊಯ್ಲು ಸಮಯ ಮತ್ತು ಕೊಯ್ಲು ನಂತರದ ವೈಜ್ಞಾನಿಕ ಮತ್ತು ತಾಂತ್ರಿಕ ಕೂಡಿ ಪದ್ಧತಿಗಳನ್ನು ರೈತಾಪಿ ವರ್ಗ ಅಳವಡಿಸಿಕೊಳ್ಳಬೇಕಾಗಿದೆ. ಆದರೆ ಭೂಮಿಯ ಒಡೆತನ ಕುಗ್ಗುವಿಕೆ, ಅದರ ಮೇಲಿನ ಹೂಡಿಕೆ (ದುಡಿಯುವ ಬಂಡವಾಳ – ಅಲ್ಪಾವಧಿ ಬೆಳೆ ಸಾಲ, ಹೂಡಿಕೆ ಸಾಲ – ಮಧ್ಯಮಾವಧಿ, ದೀರ್ಘಾವಧಿ ಸಾಲ) ಅಗತ್ಯತೆಯಷ್ಟು ಮಾಡಲಾಗದೇ ಅಷ್ಟೇ ವಿಸ್ತೀರ್ಣದಲ್ಲಿ ಗರಿಷ್ಠ ಇಳುವರಿ ಪಡೆಯ ಬಹುದಾದಷ್ಟು ಪಡೆಯಲು ಆಗುತ್ತಿಲ್ಲ. ಇದಕ್ಕೆ ಪರಿಹಾರ 'ಸಹಕಾರ ಮಾರ್ಗ' ದಲ್ಲಿ ಅಡಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಈ ದಿಸೆಯಲ್ಲಿ ತನ್ನ ಸದಸ್ಯರಿಗೆ ಸೂಕ್ತ ಮಾರ್ಗದರ್ಶನ ಹೆಚ್ಚಿನ ಹೂಡಿಕೆಗೆ ಅವಕಾಶ ಮಾಡಿಕೊಡಬೇಕಾಗಿದೆ.

ಕೃಷಿಕರು ತಮ್ಮ ಭೂಮಿಯನ್ನು ಒಗ್ಗೂಡಿಸಿ ಕೃಷಿ ಕೈಗೊಂಡಾಗ ಉತ್ತಮ ರೂಡಿಗಳನ್ನು ಪಾಲಿಸಲು ಸಾಧ್ಯವಾಗುತ್ತದೆ. ಹೀಗಾಗಿ ಇಂದಿನ ಅವಶ್ಯಕತೆ ಜಂಟಿ ಬೇಸಾಯ ಸಹಕಾರ ಸಂಘ, ಸಮೂಹ ಬೇಸಾಯ ಸಹಕಾರ ಸಂಘಗಳ ಸ್ಥಾಪನೆ. ಕೃಷಿಕರು ಒಗ್ಗಟ್ಟಿನಿಂದ ಕೈಜೋಡಿಸಿದರೆ, ಯುವ ಜನತೆ 'ಸಹಕಾರ' ದ ಉಪಯುಕ್ತತೆ ಅರಿತು ನಾಯಕತ್ವ ನೀಡುವುದರೊಂದಿಗೆ ಇದು ಸಾಧ್ಯವಾಗುತ್ತದೆ. ಭೂಮಿ ಒಗ್ಗೂಡಿಸಿ ಸಾಮೂಹಿಕವಾಗಿ ಸಂಪನ್ಮೂಲಗಳ ಸದ್ಬಳಕೆ ಇಂದ ಅಧಿಕ ಇಳುವರಿ ಪಡೆದು ಆಹಾರ ಭದ್ರತೆ ಸಾಧಿಸಲು ಸಾಧ್ಯವಾಗುತ್ತದೆ. ರೈತರಿಗೆ ಅತಿ ನೇರ ಸಂಪರ್ಕ ಹೊಂದಿರುವ ಪ್ರಾ.ಕೃ. ಪ.ಸ.ಸಂಘಗಳು ರೈತರಿಗೆ ಅಗತ್ಯ ಮಾಹಿತಿ, ತಂತ್ರಜ್ಞಾನ, ಮಣ್ಣಿನ ಪರೀಕ್ಷೆ ಸೌಲಭ್ಯಗಳನ್ನು ಒದಗಿಸಲು 'ರೈತ ಸೇವಾ ಕೇಂದ್ರ' ಗಳಾಗಿ ಕರ್ತವ್ಯ ನಿರ್ವಹಿಸಬೇಕು. ಈಗಾಗಲೇ ಕೆಲವು ಸಂಘಗಳು ಈ ರೀತಿ ಕರ್ತವ್ಯ ನಿರ್ವಹಿಸುತ್ತಿವೆ. ಕೃಷಿ, ತೋಟಗಾರಿಕೆ ಇಲಾಖೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಇರಿಸಿಕೊಂಡಾಗ ರೈತರಿಗೆ ಈ ಅನುಕೂಲ ಒದಗಿಸಲು ಸಾಧ್ಯವಾಗುತ್ತದೆ. ಅಲ್ಲದೆ ಅಗತ್ಯ ಪರಿಕರಗಳನ್ನು ಸಂಘದಿಂದ ರೈತರಿಗೆ ಒದಗಿಸಬಹುದು. 'ಬಹುಸೇವಾ ಕೇಂದ್ರ' 'ವಿವಿದೊದ್ದೇಶ ಗ್ರಾಮೀಣ ಸಹಕಾರ ಸಂಘಗಳಾಗಿ' ಕೇಂದ್ರ ಸರ್ಕಾರದ ಆಶಯದಂತೆ ಕರ್ತವ್ಯ ನಿರ್ವಹಿಸಿದಂತಾಗುತ್ತದೆ. ಆಹಾರ ಉತ್ಪಾದನೆ ಹೆಚ್ಚಳಗೊಳಿಸುವಲ್ಲಿ 'ಸಹಕಾರ ವಲಯ' ತನ್ನ ಕೊಡುಗೆ ನೀಡಿದಂತಾಗುತ್ತದೆ.

**ನೀರು :** ಕೃಷಿಗೆ ಅತಿ ಅಗತ್ಯ ಸಂಪನ್ಮೂಲ ನೀರು. ನೀರಿನ ಲಭ್ಯತೆ ಕಡಿಮೆಯಾಗುತ್ತಿರುವುದು ಆತಂಕದ ಸ್ಥಿತಿಗೆ ಕಾರಣವಾಗುತ್ತಿದೆ. ಪ್ರತಿ ನೀರಿನ ಹನಿಯ ಸದ್ಬಳಕೆ ಈ ದಿನದ ಅವಶ್ಯಕತೆ. ಮುಂಗಾರು – ಹಿಂಗಾರು ಅನಿಶ್ಚಿತತೆ ಖಾಯಂ ನೀರಾವರಿ ಸೌಲಭ್ಯಗಳಾದ ಜಲಾಶಯ, ಅಂತರ್ಜಲ ವನ್ನು ಹೆಚ್ಚು ಅವಲಂಭಿಸುವಂತೆ ಮಾಡಿದೆ. ಪ್ರಾಚೀನ ಕೃಷಿ ರೂಢಿ ಪದ್ಧತಿಗಳು, ಋತು ಆಧಾರಿತ ಒಣ ಭೂಮಿ ಕೃಷಿ ಕನಸಾಗಿದೆಯೋ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಪರಿಸ್ಥಿತಿಯಲ್ಲಿ ಭೂಮಿಯಲ್ಲಿನ ನೀರು, ಆವಿ ಮತ್ತು ಬಾಷ್ಪವಿಸರ್ಜನೆ ಯಿಂದ ನಷ್ಟವಾಗುವುದನ್ನು ತಪ್ಪಿಸಲು, ಸಸ್ಯಗಳು ತನ್ನ ಬೇರಿನ ವ್ಯವಸ್ಥೆಯಿಂದ ಪೂರ್ಣ ಪಡೆಯಲು ಅನೇಕ ಆಧುನಿಕ ಕೃಷಿ ತಂತ್ರಜ್ಞಾನಗಳು ಸಹಾಯಕ್ಕೆ ಬಂದಿವೆ. ಈ ಪರಿಕರ (ಪ್ಲಾಸ್ಟಿಕ್ ಹೊದಿಕೆ, ಹಸಿರುಮನೆ) ಗಳನ್ನು ಸಹಕಾರ ಸಂಘಗಳು ಒದಗಿಸಬೇಕು.

**ಮಳೆ ನೀರು ಕೊಯ್ಲು :** ಇಳಿಜಾರು ಕೃಷಿ ಭೂಮಿಗಳಲ್ಲಿ ಮಳೆಯಿಂದ ಬಿದ್ದ ನೀರನ್ನು ಇಂಗು ಗುಂಡಿಗಳ ಮೂಲಕ ಸಂಗ್ರಹ ಮಾಡಿ ಉಪಯೋಗಿಸಿಕೊಳ್ಳಬಹುದು. ಕಟ್ಟಡಗಳ ಮೇಲ್ಚಾವಣಿ, ಹಸಿರುಮನೆ ಮೇಲೆ ಬಿದ್ದ ಮಳೆನೀರು ಸಂಗ್ರಹಣೆಗೆ ವ್ಯವಸ್ಥೆ ರೂಪಿಸಿಕೊಳ್ಳಬೇಕು. ಕೊಳವೆ ಬಾವಿಗಳಿಗೆ ಅಂತರ್ಜಲ ಮರು ಪೂರಣ ವ್ಯವಸ್ಥೆ ಕಲ್ಪಿಸಬೇಕು. ಇದರಿಂದ ಅಂತರ್ಜಲ ಮಟ್ಟ ಏರಿಸಲು ಸಾಧ್ಯವಾಗುತ್ತದೆ. ಪ್ರಾ.ಕೃ.ಪ.ಸ. ಸಂಘಗಳು ರೈತರಿಗೆ ಕೃಷಿ, ತೋಟಗಾರಿಕೆ, ಗಣಿ ಭೂ ವಿಜ್ಞಾನ (ಅಂತರ್ಜಲ) ಇಲಾಖೆಗಳ ಸಹಯೋಗದೊಂದಿಗೆ ರೈತರಿಗೆ ಮಾಹಿತಿ, ತಂತ್ರಜ್ಞಾನ ಒದಗಿಸಲು, ಸಹಕಾರ ತತ್ವ 'ಸಾಮಾಜಿಕ ಕಳಕಳಿ' ಅಂಗವಾಗಿ ಆರ್ಥಿಕ ನೆರವನ್ನೂ ಒದಗಿಸಬಹುದಾಗಿದೆ.

**ಜಲಾನಯ ಆಶ್ರಿತ ನೀರಾವರಿ :** ಜಲಾಶಯ ಆಶ್ರಿತ 'ಜಲಾನಯನ ಪ್ರದೇಶಗಳ' (Command Area Development Agency-CADA) ನೀರಾವರಿ ಬಳಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಹಕಾರ ಸಂಘಗಳಿಗೆ ಶಾಸನಬದ್ಧ ನೀರಾವರಿ ನಿರ್ವಹಣೆಯ ಜವಾಬ್ದಾರಿಯನ್ನು ಪೂರ್ಣ ಪ್ರಮಾಣದಲ್ಲಿ ವಹಿಸಲಾಗಿಲ್ಲ. ಈ ಪ್ರಜಾಸತ್ತಾತ್ಮಕ ನೀರಾವರಿಯ ಸದ್ಬಳಕೆ ಬಗ್ಗೆ ಪೂರ್ಣ ಜ್ಞಾನ ಹೊಂದಿ ಪೂರ್ಣ ನಿರ್ವಹಣೆಯನ್ನು ಅವುಗಳೇ

ವಹಿಸಿಕೊಂಡಲ್ಲಿ ನೀರು ಪೋಲಾಗದಂತೆ, ಅತಿ ನೀರಾವರಿಯಿಂದ ಮಣ್ಣಿನ ಸವಕಳಿ, ಮಣ್ಣಿನ ಅನಾರೋಗ್ಯ ಪರಿಸ್ಥಿತಿ ನಿರ್ಮಾಣವಾಗದಂತೆ ನಿರ್ವಹಿಸಬಹುದಾಗಿದೆ. ಹಾಲಿ ಸರ್ಕಾರದ ಅನುದಾನವನ್ನು ಅವಲಂಬಿಸಿ ನಿರ್ವಹಿಸುವಂತಾಗಿದೆ. ಅವುಗಳದೇ ಆದ ಸಂಪನ್ಮೂಲಕ್ಕೆ ಅವಕಾಶವಿರುವುದಿಲ್ಲ. ಸರ್ಕಾರದ ಸೆಸ್‌ನಲ್ಲಿ ಇದಕ್ಕೆ ಭಾಗವಿರುವುದಿಲ್ಲ. ನೀರಾವರಿ ಕಾಯ್ದೆಯಲ್ಲಿ ಅವಕಾಶವಿದ್ದರೂ ಅವುಗಳ ಶೃಂಗ ವ್ಯವಸ್ಥೆ ನಿರ್ಮಾಣವಾಗಿಲ್ಲ. ಈ ಲೋಪದೋಷಗಳ ನಿವಾರಣೆಯಿಂದ ಈ ಸಹಕಾರ ಸಂಘಗಳು ಸಶಕ್ತತೆಯಿಂದ ಕಾರ್ಯನಿರ್ವಹಿಸಿ ಆಹಾರದ ಉತ್ಪಾದನೆ ಇಳುವರಿ ಹೆಚ್ಚಿಸುವಲ್ಲಿ ತನ್ನದೇ ಕೊಡುಗೆ ನೀಡಬಲ್ಲದು. ಕಿರು ನೀರಾವರಿ ಸೌಲಭ್ಯಗಳಿಗೂ ಈ ಹಿಂದೆ ನೀರಾವರಿ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿತ್ತು. ಕಾರ್ಯನಿರ್ವಹಿಸದೆ ಸಮಾಪನೆ ಮಾಡಿ ರದ್ದುಗೊಳಿಸಲಾಯಿತು. ಸಹಕಾರ ಸಂಘಗಳ ಸ್ಥಾಪನೆ ಬಗ್ಗೆ ಸ್ಥಳೀಯ ಯುವ ಮುಖಂಡರು ನಾಯಕತ್ವ ವಹಿಸಿಕೊಂಡು ಚಾಲನೆ ನೀಡಿದರೆ ಸಹಕಾರ ಚಳುವಳಿ ಯಶಸ್ವಿಯಾಗಿ ಮುನ್ನಡೆದು ಆಹಾರ ಭದ್ರತೆಗೆ ತನ್ನದೇ ಕೊಡುಗೆ ನೀಡಬಲ್ಲದು.

**ಸೂಕ್ಷ್ಮ ನೀರಾವರಿ : (Micro-irrigation) :** ಹನಿ ನಿರಾವರಿ, ಸಿಂಪಡನೆ ನೀರಾವರಿಗಳು ಅತ್ಯಂತ ಉಪಯುಕ್ತವಾದ ಸಾಧನಗಳಾಗಿವೆ. ನೀರಿನ ಸದ್ಬಳಕೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತದೆ. ಸಸ್ಯಕ್ಕೆ ಅಗತ್ಯತೆಯ ನೀರನ್ನು ಅಲ್ಪ ಪ್ರಮಾಣದಲ್ಲಿ ಒದಗಿಸಿ ಅದು ಪೂರ್ಣಪ್ರಮಾಣದಲ್ಲಿ ನಿರಂತರವಾಗಿ ಸಸ್ಯಕ್ಕೆ ಒದಗಿಸುವ ಅನು ಕೂಲ ಇದರಲ್ಲಿದೆ. ಇದರಿಂದ ಅಂತರ್ಜಲ ಆಧಾರಿತವಾಗಿರುವುದರಿಂದ ಅಂತರ್ಜಲ ನ್ಯಾಯಯುತ ಉಪಯೋಗ ಪಡೆದಂತಾಗುತ್ತದೆ. ಪ್ರಾ.ಕೃ.ಪ.ಸ. ಸಂಘಗಳು ಈ ಪರಿಕರಗಳ ಸರಬರಾಜು ಕೃಷಿ, ತೋಟಗಾರಿಕೆ ಇಲಾಖೆಗಳೊಂದಿಗೆ, ಸಹಯೋಗದೊಂದಿಗೆ ಈ ರೂಢಿ ಪದ್ಧತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಜಾರಿಗೆ ತರಬೇಕು. ಈ ಪದ್ಧತಿ ಅಳವಡಿಕೆ, ಪರಿಕರಗಳಿಗೆ ಮಧ್ಯಮಾವಧಿ ಸಾಲಗಳನ್ನು ಒದಗಿಸಬೇಕು (ಹೂಡಿಕೆ ಸಾಲ). ಸರ್ಕಾರದ ಸಬ್ಸಿಡಿ ಯೋಜನೆಗಳ ಸದ್ಬಳಕೆ ಯಾಗಬೇಕು. ಇದು ಕೂಡ ಸಾಕಷ್ಟು ಆಹಾರ ಉತ್ಪಾದನೆ ಹೆಚ್ಚಳದಲ್ಲಿ ತನ್ನದೇ ಕೊಡುಗೆ ನೀಡಬಲ್ಲದು.

**ವಿದ್ಯುಚ್ಛಕ್ತಿ ಸರಬರಾಜು :** ವಿದ್ಯುಚ್ಛಕ್ತಿ ಇಲ್ಲದೇ ನೀರಿನ ಸರಬರಾಜು ಮಾಡಲಾಗುವುದಿಲ್ಲ. ಅಗತ್ಯ ಶಕ್ತಿಯುತ ನಿರಂತರ ವಿದ್ಯುಚ್ಛಕ್ತಿ ಸರಬರಾಜು ಕೃಷಿಗೆ ಅತ್ಯಂತ ಅವಶ್ಯಕ. ಇದಕ್ಕೆ ಸರ್ಕಾರವನ್ನೇ ಅವಲಂಭಿ ಸಬೇಕಾಗಿದೆ. ಆದರೆ 'ಸಹಕಾರ'ವೂ ಇದನ್ನು ನಿರ್ವಹಿಸಬಲ್ಲದು ಎಂಬುದಕ್ಕೆ 'ಹುಕ್ಕೇರಿ ತಾಲ್ಲೂಕು ವಿದ್ಯುಚ್ಛಕ್ತಿ ಸರಬರಾಜು ಸಹಕಾರ ಸಂಘ' ದ ಕಾರ್ಯಾಚರಣೆ ಉದಾಹರಣೆಯಾಗಿದೆ. ಸಹಕಾರ ಸಂಘಗಳು, ಅದರಲ್ಲಿನ ಸಹಕಾರ ನಾಯಕತ್ವ ಈ ದಿಸೆಯಲ್ಲಿ ಕಾರ್ಯನಿರ್ವಹಿಸಿದಾಗ ತಮ್ಮ ಅಗತ್ಯತೆಯನ್ನು ತಾವೇ ನಿರ್ವಹಿಸಿ ರಾಷ್ಟ್ರ ನಿರ್ಮಾಣದಲ್ಲಿ 'ಆಹಾರ ಭದ್ರತೆ' ಸಾಧಿಸುವಲ್ಲಿ ಸಾಧ್ಯವಾಗುತ್ತದೆ.

**ಜೀವ ವೈವಿಧ್ಯತೆ :** ಮಲೆನಾಡು ನಿತ್ಯ ಹರಿದ್ವರ್ಣ ಅರಣ್ಯದಿಂದ ಆವರಿಸಿದೆ. ಬಯಲು ಪ್ರದೇಶಗಳಲ್ಲಿ ನೆಡು ತೋಪು, ಗೋಮಾಳ, ಬೀಡು ಭೂಮಿ ಹೀಗೆ ಜೈವ ವಿವಿಧ್ಯತೆಯ ಪ್ರದೇಶಗಳು ಪಶು ಪಕ್ಷಿಗಳಿಗೆ

**ಹನಿ ನಿರಾವರಿ, ಸಿಂಪಡನೆ ನೀರಾವರಿಗಳು ಅತ್ಯಂತ ಉಪಯುಕ್ತವಾದ ಸಾಧನಗಳಾಗಿವೆ. ನೀರಿನ ಸದ್ಬಳಕೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತದೆ. ಸಸ್ಯಕ್ಕೆ ಅಗತ್ಯತೆಯ ನೀರನ್ನು ಅಲ್ಪ ಪ್ರಮಾಣದಲ್ಲಿ ಒದಗಿಸಿ ಅದು ಪೂರ್ಣಪ್ರಮಾಣದಲ್ಲಿ ನಿರಂತರವಾಗಿ ಸಸ್ಯಕ್ಕೆ ಒದಗಿಸುವ ಅನು ಕೂಲ ಇದರಲ್ಲಿದೆ. ಇದರಿಂದ ಅಂತರ್ಜಲ ಆಧಾರಿತವಾಗಿರುವುದರಿಂದ ಅಂತರ್ಜಲ ನ್ಯಾಯಯುತ ಉಪಯೋಗ ಪಡೆದಂತಾಗುತ್ತದೆ.**

ಆಶ್ರಯ ನೀಡುವುದಲ್ಲದೆ ಮುಂಗಾರು – ಹಿಂಗಾರು ಸಕಾಲದಲ್ಲಿ ಮಳೆ ತರುವ ಆಶ್ರಯ ತಾಣಗಳಾಗಿದ್ದವು. ಜನಸಂಖ್ಯೆ ಸ್ಫೋಟ, ಮಾನವನ ಅಗತ್ಯತೆಗೆ ತಕ್ಕಂತೆ ಅಥವಾ ಅವನ ಅತಿ ಆಸೆಯಿಂದ ಇದು ಪೂರ್ಣ ನಾಶಗೊಂಡಿದೆ. ನಾಶಗೊಳ್ಳುತ್ತಿದೆ. ಇದನ್ನು ಕಾಪಾಡದಿರುವುದರಿಂದ ಸಹಜ ಕೃಷಿಗೆ ದಕ್ಕೆ ಬಂದಿದೆ. ಇದರ ಪುನರ್‌ನಿರ್ಮಾಣ ಈ ದಿನದ ಅವಶ್ಯಕತೆ. ಈ ದಿಸೆಯಲ್ಲಿ ಸಹಕಾರ ಸಂಘಗಳು ಆಲೋಚಿಸಿ ಕ್ರಮ ಕೈಗೊಳ್ಳಬೇಕು. ತಮ್ಮ ಖಾಲಿ ನಿವೇಶನ ಮತ್ತು ಎಲ್ಲಿ ಸಾಧ್ಯವೋ ಅಲ್ಲಿ ಸ್ಥಳೀಯ ವಾಯುಗುಣಕ್ಕೆ ತಕ್ಕ ಮರ ಬೆಳೆಸುವ ಕಾರ್ಯಕ್ರಮವನ್ನು ತ್ವರಿತವಾಗಿ ಹಾಕಿಕೊಳ್ಳಬೇಕು. ಎನ್.ಡಿ.ಡಿ.ಬಿ. ಆಶ್ರಯದಲ್ಲಿ ದಶಕಗಳ ಹಿಂದೆ ಮರ ಬೆಳಸುವವರ ಸಹಕಾರ ಸಂಘಗಳು ಮತ್ತು ಅದರ ಮಹಾಮಂಡಳವನ್ನು ಸ್ಥಾಪಿಸಲಾಗಿತ್ತು. (ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ) ಮಹಾಮಂಡಳ ಸಮಾಪನೆಯಾಗಿದೆ ಎಂದು ತಿಳಿದು ಬಂತು. ಪ್ರಾಥಮಿಕ ಸಂಘಗಳ ಉಸ್ತುವಾರಿಗೆ 'ಟ್ರಸ್ಟ್' ರಚಿಸಲಾಗಿದೆ ಎಂಬ ಮಾಹಿತಿ ಇದೆ. ಇದರ ಬಗ್ಗೆ ಅಧ್ಯಯನ ಕೈಗೊಂಡು ಈ ಪ್ರಯತ್ನಗಳಿಗೆ ಪುನಶ್ಚೇತನ ನೀಡಬಹುದೇ? ನೀಡಿದಲ್ಲಿ ಜೈವವೈವಿಧ್ಯತೆ ಹವಾಮಾನ ವೈಪರೀತ್ಯತೆಗಳನ್ನು ಕಡಿಮೆ ಮಾಡುವುದಲ್ಲದೇ ಮಣ್ಣಿನ ಸವಕಳಿ, ಫಲವತ್ತತೆ, ನೀರು ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುತ್ತದೆ. ಅಂತರ್ಜಲ ಮಟ್ಟವನ್ನು ಏರಿಸುತ್ತದೆ. ಇದರಿಂದ ಆಹಾರ ಭದ್ರತೆ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಟ್ಟಂತಾಗುತ್ತದೆ.

ಭಾರತವು ಹಸಿವು ಸೂಚ್ಯಾಂಕದಲ್ಲಿ ಅತಿ ಕೆಳಗಿರುವುದನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದು, ವಿಶ್ವಕ್ಕೆ ನಾಯಕ ಎನಿಸಿಕೊಳ್ಳುತ್ತಿರುವ, ಐದನೇ ಆರ್ಥಿಕ ಶಕ್ತಿಯಿಂದ ಮೂರನೇ ಸ್ಥಾನ ಗಳಿಸಲು ಯತ್ನಿಸುತ್ತಿರುವ ಈ ಸಂದರ್ಭದಲ್ಲಿ, ಭಾರತವು ಈ ವಿಷಯದಲ್ಲಿ ನಾಚಿಸುವ ಸಂದರ್ಭ ಮೂಡದಂತೆ ನೋಡಿಕೊಳ್ಳುವುದು ಭಾರತದ ಪ್ರತಿ ಪ್ರಜೆಯ ಕರ್ತವ್ಯವಾಗಿರುತ್ತದೆ. ಸಹಕಾರ ಚಳುವಳಿಯ ಜವಾಬ್ದಾರಿ ಕೂಡ ಆಗಿರುತ್ತದೆ.

ರಾಗಿಮುದ್ದೆಯ ನುಂಗಿ ನಲಿದು ಬಾಳ್ವಾತಂಗೆ ।  
ಕಾಗೆ ಕದ್ದುಣುವ ಭಕ್ಷವು ಕಂಡು ಕುರುಬೆ? ॥  
ನೀಗುವುದು ಹಸಿವನ್ ಉಣಿ ಸೆಂತಪ್ಪುದಾದೊಡಂ ।  
ಬಾಗಿಸದಿ ರಾತ್ಮನು – ಮಂಕುತಿಮ್ಮ ॥

# ಸಹಕಾರ ಕ್ಷೇತ್ರ–ಬದಲಾವಣೆಯ ಹಾದಿಯಲಿ



**ಪೃಥ್ವಿ**
ಉಪನ್ಯಾಸಕರು




ಸಹಕಾರ ಕ್ಷೇತ್ರವು ಹೊಸ ಹೊಸ ಪದ್ಧತಿಗಳಿಗೆ ಅವಕಾಶ ಕೊಡುತ್ತಾ ಹೊಸ ಹೊಸ ಕ್ಷೇತ್ರಗಳಿಗೆ ವಿಸ್ತರಿಸಿಕೊಳ್ಳುತ್ತಿರುವುದು ಅದಕ್ಕಿರುವ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ. ಇದರಿಂದ ಸದಸ್ಯರಿಗೆ ಜೀವನೋಪಾಯ ದೊರೆಯುವುದರ ಜೊತೆಗೆ ಆ ಕ್ಷೇತ್ರದ ಸುಸ್ಥಿರ ಬೆಳವಣಿಗೆಯೂ ಸಾಧ್ಯವಾಗುತ್ತದೆ.

ಸಹಕಾರ ಕ್ಷೇತ್ರದಲ್ಲಿ ನಡೆಯುತ್ತಿರುವ ಬದಲಾವಣೆ ಕಾರ್ಯಕ್ಕೂ ಸಹಕಾರದ ಮೂಲ ತತ್ವಗಳ ಅರಿಯುವಿಕೆಗೂ ನೇರ ಸಂಬಂಧವಿದೆ. ಸಹಕಾರದ ತತ್ವಗಳು ಪ್ರಜಾಪ್ರಭುತ್ವ ಗುಣ, ಸಮಾನ ಅವಕಾಶ ಸಾಮೂಹಿಕ ಪ್ರಯತ್ನದಿಂದ ಸಾಮೂಹಿಕ ಪ್ರತಿಫಲ ಇವೆಲ್ಲವೂ ಆ ಸಂಘದ ಚಟುವಟಿಕೆಗಳಿಗೆ ಪೂರಕವಾಗಿ ಸದಸ್ಯರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸುವತ್ತ ಸುಗಮ ಮಾರ್ಗವಾಗುತ್ತದೆ. ರಿಕ್ಷಾ ಚಾಲಕರ ಸಹಕಾರ ಸಂಘ, ಚಿಂದಿ ಆಯುವವರ ಸಹಕಾರ ಸಂಘ ಅಥವಾ ಹಾವಾಡಿಗರ ಸಹಕಾರ ಸಂಘಗಳು, ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಂಘ, ಅಣಬೆ ಬೆಳೆಗಾರರ ಸಂಘ ಇವೆಲ್ಲಾ ಹೊಸತನದ ಬದಲಾವಣೆಗೆ ತೆರೆದುಕೊಳ್ಳುವ ಪ್ರಯತ್ನವಾಗಿದೆ. ಇದರಿಂದ ಸಮಾಜದಲ್ಲಿ ಬಡಜನರ ಆದಾಯ ಸೃಷ್ಟಿಗೆ ದಾರಿ ಮಾಡಿ ಅವರ ಬಡತನವನ್ನು ನಿವಾರಿಸುವ ಪ್ರಯತ್ನವಾಗಿದೆ.

ಸಹಕಾರ ಕ್ಷೇತ್ರವು ಸೇವೆಯ ಜೊತೆಗೆ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಾಗಿರುವುದರಿಂದ ಬದಲಾವಣೆಗೆ ಯತ್ನಿಸುವುದು ಇಡೀ ಆಂದೋಲನದ ಯಶಸ್ಸಿಗೂ ಕಾರಣವಾಗುತ್ತದೆ, ಸಹಕಾರ ಕ್ಷೇತ್ರದ ವಿಸ್ತರಣೆಗೂ ಅವಕಾಶವಾಗಿ ಹೊಸ ಹೊಸ ಮಾದರಿಯ ಸಹಕಾರ ಸಂಘಗಳ ಪ್ರಾರಂಭವಾಗುತ್ತದೆ. ಸಹಕಾರ ಕ್ಷೇತ್ರದ ಹೆಮ್ಮೆಯ ಸಂಸ್ಥೆಯಾದ ಎಂಸಿಎಫ್ ಮಾದರಿ ಸಂಘಗಳು ಹೊಸ ಹೊಸ ಮೌಲ್ಯವರ್ಧಿತ ಉತ್ಪನ್ನಗಳನ್ನು ಮಾಡಲು ಪ್ರಾರಂಭಿಸಿರುವುದು ಇದಕ್ಕೆಉದಾಹರಣೆ. ವಿಮಾ ಕ್ಷೇತ್ರ, ಪ್ರವಾಸೋದ್ಯಮ, ಆರೋಗ್ಯ ಕ್ಷೇತ್ರ ಇವುಗಳಲ್ಲಿ ಸಮಾಜದ ಜನರ ಬೇಡಿಕೆಗೆ ಸ್ಪಂದಿಸುವಂತಹ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸಿರುವುದು ಉತ್ತಮ ಬೆಳವಣಿಗೆಯಾಗಿದೆ.

ಈ ನಿಟ್ಟಿನಲ್ಲಿ ಸಮಾಜದ ಯುವಜನಾಂಗ ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಅಪೇಕ್ಷಣೀಯ. ಹೊಸ ಬದಲಾವಣೆಗಳಿಗೆ ಹೊಸ ಕಲ್ಪನೆ ಮತ್ತು ಮನೋಭಾವಗಳಿಗೆ ಯುವಕರು ಆಶಿಸುವುದು ಸಹಜ, ಅವರ ವೈಜ್ಞಾನಿಕ ಮನೋಭಾವನೆ ಮತ್ತು ತಾಂತ್ರಿಕತೆ ಹೊಸ ಕಲ್ಪನೆಗಳಿಗೆ

ಸಹಕಾರದ ತತ್ವಗಳು ಪ್ರಜಾಪ್ರಭುತ್ವ ಗುಣ, ಸಮಾನ ಅವಕಾಶ ಸಾಮೂಹಿಕ ಪ್ರಯತ್ನದಿಂದ ಸಾಮೂಹಿಕ ಪ್ರತಿಫಲ ಇವೆಲ್ಲವೂ ಆ ಸಂಘದ ಚಟುವಟಿಕೆಗಳಿಗೆ ಪೂರಕವಾಗಿ ಸದಸ್ಯರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸುವತ್ತ ಸುಗಮ ಮಾರ್ಗವಾಗುತ್ತದೆ.







ಮತ್ತು ಪ್ರಯತ್ನಗಳಿಗೆ ಮಾರ್ಗವಾಗುತ್ತದೆ. ಈಗಿನ ತಾಂತ್ರಿಕ ಯುಗದಲ್ಲಿ ಕಾರ್ಪೊರೇಟ್ ಜಗತ್ತಿಗೆ ಸರಿಸಮಾನರಾಗಿ ಪಾಲ್ಗೊಳ್ಳಬೇಕಾದರೆ ಸಹಕಾರಿ ಸಂಸ್ಥೆಗಳೂ ಅದೇ ವೇಗದಲ್ಲಿ ಬದಲಾಗಬೇಕಾಗುತ್ತದೆ.

ಸಾಮಾಜಿಕ ಜಾಲತಾಣಗಳನ್ನು ಮತ್ತು ಮಾಹಿತಿ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವತ್ತ ಸಹಕಾರ ಸಂಸ್ಥೆಗಳು ಕಾರ್ಯೋನ್ಮುಖವಾಗಬೇಕಾಗಿದೆ.

ಇವುಗಳ ಮೂಲಕ ಯುವಜನಾಂಗವನ್ನು ಆಕರ್ಷಿಸಿ ಅವರಲ್ಲಿರುವ ಬದಲಾವಣೆಯ ಮನೋಭಾವನೆಯನ್ನು ಬಳಸಿಕೊಳ್ಳಲು ಪ್ರಯತ್ನಿಸಬೇಕಾದುದು ಪ್ರಸ್ತುತ ಅವಶ್ಯಕತೆಯಾಗಿದೆ. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಅಂದು Industrialise or perish ಎಂದಿದ್ದರು, ಇಂದು ಸಹಕಾರಿಗಳು Innovate and succeed or perish ಎನ್ನಬೇಕಾಗಿದೆ.

ಆಧುನಿಕ ಯುಗದಲ್ಲಿ ಸಂಪರ್ಕ ಮಾಧ್ಯಮಗಳ ಕ್ರಾಂತಿ ನಡೆಯುತ್ತಿದೆ. ಎಲೆಕ್ಟ್ರಾನಿಕ್ ಮಾಧ್ಯಮಗಳು, ಮೊಬೈಲ್‌ಗಳಿಂದ ಹಿಂದೆಂದೂ ಕಾಣದಷ್ಟು ಶೀಘ್ರವಾಗಿ ಸಂಪರ್ಕ ಏರ್ಪಡುತ್ತಿದೆ. ಸಹಕಾರವು ಮನುಷ್ಯ ಮನುಷ್ಯನ ನಡುವೆ ಬೆಸುಗೆಯಾಗುವಂತಹ ಚಳುವಳಿಯಾಗಿರುವುದರಿಂದ ಯುವ ಜನಾಂಗವೂ ಆಡಳಿತದಲ್ಲಿ ಭಾಗಿಗಳಾಗುವಂತೆ ಪ್ರೋತ್ಸಾಹಿಸಬೇಕಾಗಿದೆ.

ದೇಶದಲ್ಲಿ 16 ರಿಂದ 32ರ ವಯೋಮಾನದವರು ಸುಮರು 63% ಇರುವುದೆಂದು ಅಂದಾಜಿಸಲಾಗಿದೆ. ಇದನ್ನು ದೇಶದ ಉತ್ಪಾದನಾ ಜನಸಂಖ್ಯೆ productive population ಅಥವಾ workforce ಎನ್ನಬಹುದಾದರೆ ಅದು ಆರ್ಥಿಕತೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಇದಕ್ಕೆ ಸಹಕಾರ ಕ್ಷೇತ್ರದ ಮೂಲಕವು ಮಹತ್ವ ನೀಡಬೇಕೆನ್ನುವುದು ವಿಚಾರವಂತರ ಅಭಿಮತ. ಬಿಸಿರಕ್ತವನ್ನು ಆಂದೋಲನಕ್ಕೆ ಸೇರಿಸಿದರೆ ಚಳುವಳಿಯಲ್ಲಿ ಸಂಚಲನ ಉಂಟಾಗಬಹುದೆಂಬ ನಿರೀಕ್ಷೆ. ವೃತ್ತಿಪರತೆಯಿಂದ ಉದ್ದಿಮೆಗಳನ್ನು ಸ್ಥಾಪಿಸಿ ನಡೆಸುವ ಹುಮ್ಮನಸ್ಸು ಇರುವುದು ಯುವಜನತೆಯಲ್ಲಿ. ಆದರಿಂದ ಯುವಜನತೆಯ ಮೇಲೆ ಸಹಕಾರ ಸಂಘಗಳೂ ಗಮನ ಕೇಂದ್ರಿಕರಿಸಬೇಕಾಗಿದೆ.

ಸಾಂಪ್ರಾದಾಯಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರ ಸಂಘಗಳು ಹೊಸ ಕ್ಷೇತ್ರ ಮತ್ತು ಬದಲಾವಣೆಗೆ, ವಿಸ್ತರಣೆಗೆ ಸಿದ್ಧವಾಗುತ್ತಿರುವ ದಿಸೆಯಲ್ಲಿಯುವ ಸಮೂಹದ ಸಹಭಾಗಿತ್ವದಿಂದ ಯಶಸ್ಸು ಸುಲಭಎಂಬುದನ್ನು ಮನಗಾಣಬೇಕು. ಸ್ವಷ್ಟ ಉದ್ದೇಶ ಮತ್ತು ಸಾಧನೆಯತುಡಿತ ಸಮಾಜಮುಖಿ ಕಾರ್ಯಗಳಲ್ಲಿ ಅತ್ಯಗತ್ಯ ಎಂದು ತಿಳಿದು ಗಂಭೀರ ಪ್ರಯತ್ನಗಳು ನಡೆಯಬೇಕಾಗಿದೆ.

## ಆಯ್ಕೆ




ಕೌಟಿಲ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಇದರ ನೂತನ ಆಡಳಿತಮಂಡಳಿಯ ಅಧ್ಯಕ್ಷರಾಗಿ ಕೆ.ಪಿ.ಶಿವಸ್ವಾಮಿ ಉಪಾಧ್ಯಕ್ಷರಾಗಿ ಕೃಷ್ಣ ಜಿ.ಪುರೋಹಿತ್ ರವರು ಆಯ್ಕೆಯಾಗಿರುತ್ತಾರೆ.

## ಆಯ್ಕೆ




ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ. ರಾಜೇಂದ್ರ ಬಾಬು, ಉಪಾಧ್ಯಕ್ಷರಾಗಿ ಪರಮೇಶರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

....ಹಿಂದಿನ ಸಂಚಿಕೆಯಿಂದ

ಸಂಘದ ಉದ್ದೇಶಗಳ ಸಾಧನೆಗಾಗಿ ದಿನ ನಿತ್ಯದ ಆಡಳಿತವನ್ನು ನಡೆಸುವುದು ಆಡಳಿತ ಮಂಡಳಿಯು ಹೊಣೆಗಾರಿಕೆ ಆಗಿರುತ್ತದೆ.ಅದರ ಕರ್ತವ್ಯಗಳ ವಿವರಗಳನ್ನು ಸೆಕ್ಷನ್ 28ಸಿನಲ್ಲಿ ನೀಡಲಾಗಿದೆ.ಇವುಗಳಲ್ಲಿ ಪ್ರಮುಖವಾದದ್ದೆಂದರೆ.

1. ಸದಸ್ಯತ್ವ ನೀಡುವುದು.
2. ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಮತ್ತು ನಿಧಿಗಳನ್ನು ತೊಡಗಿಸುವುದು;
3. ಸದಸ್ಯರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವುದು; ಸಾಲ ಮಂಜೂರಿ, ಸಾಲದ ಭದ್ರತೆ ಪಡೆಯುವುದು ಇತ್ಯಾದಿಗಳನ್ನು ನಡೆಸುವುದು; ಅದಕ್ಕೆ ನಿಬಂಧನೆಗಳನ್ನು ರೂಪಿಸುವುದು;
4. ಸಂಘದ ಸಿಬ್ಬಂದಿ ನೇಮಕಾತಿ, ಅವರ ಸೇವಾ ನಿಬಂಧನೆಗಳ ರಚನೆ, ವೃಂದ ಬಲಗಳ ನಿಗಧಿ ಇತ್ಯಾಧಿಗಳನ್ನು ಕಾಯಿದೆ ಮತ್ತು ನಿಯಮಗಳ ಪ್ರಕಾರ ಮಾಡುವುದು.
5. ಸಂಘದ ಉದ್ದೇಶ ಸಾಧನೆಗೆ ಗುರಿಗಳನ್ನು ನಿಗದಿ ಪಡಿಸುವುದು.
6. ಸಂಘದ ಖರ್ಚುಗಳನ್ನು ಪರಿಶೀಲಿಸಿ ಒಪ್ಪುವುದು;
7. ಲೆಕ್ಕಪರಿಶೋಧನೆಗೆ ಏರ್ಪಾಡು ಮಾಡುವುದು;
8. ಮಹಾಸಭೆಗಳನ್ನು ನಡೆಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು;
9. ತಮ್ಮ ಅವಧಿ ಮುಗಿಯುವ ಮುಂಚೆ ಮುಂದಿನ ಆಡಳಿತ ಮಂಡಳಿಯ ರಚನೆಗೆ ಕ್ರಮ ತೆಗೆದುಕೊಳ್ಳುವುದು ಇತ್ಯಾದಿ.

ಇದಕ್ಕಾಗಿ ಆಡಳಿತ ಮಂಡಳಿಯು ಕಾಲ ಕಾಲಕ್ಕೆ ಸಭೆಗಳನ್ನು ನಡೆಸಬೇಕು, ಈ ಸಭೆಗಳನ್ನು ನಡೆಸುವ ವಿಧಾನದ ಬಗ್ಗೆ ಕೆಲವು ವಿಧಾನಗಳನ್ನು ಉಪನಿಯಮನಗಳಲ್ಲಿ ವಿಧಿಸಲಾಗಿರುತ್ತದೆ.ಈ ಬಗ್ಗೆ ಕಾಯಿದೆ ಮತ್ತು ನಿಯಮಗಳಲ್ಲಿ ಸಹ ವಿಧಿಸಲಾಗಿದೆ.

ಯಾವುದೇ ಸಹಕಾರ ಸಂಘದಲ್ಲಿ, ಅದರ ಸದಸ್ಯರಾಗಲೀ ಅಥವಾ ನಿರ್ದೇಶಕರೇ ಆಗಲಿ ಅಥವಾ ಪದಾಧಿಕಾರಿಯೇ ಆಗಿರಲಿ ಅಥವಾ ನೌಕರರೇ ಆಗಿರಲಿ, ಸರ್ಕಾರದ ಪೂರ್ವಾನುಮತಿ ಇಲ್ಲದೆ ಸಂಘದ ಖರ್ಚಿನಲ್ಲಿ ವಿದೇಶ ಪ್ರವಾಸ ಮಾಡುವಂತಿಲ್ಲ. ಹೀಗೆಂದು ಸೆಕ್ಷನ್ 28ಡಿನಲ್ಲಿ ವಿಧಿಸಲಾಗಿದೆ.

ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಹೆಚ್ ರೀತ್ಯಾ ಸಹಕಾರ ಸಂಘಗಳ ಆಡಳಿತ ಮಂಡಳಿಯಲ್ಲಿ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದ ಎರಡು ವರ್ಷಗಳ ನಂತರ ಅವರುಗಳ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಬಹುದು. ಇದಕ್ಕೆ 1/3 (ಒಂದನೇ ಮೂರರಷ್ಟು) ಚುನಾಯಿತ ನಿರ್ದೇಶಕರ ಕೋರಿಕೆ ಅಗತ್ಯವಿರುತ್ತದೆ. ಸದರಿ ಅವಿಶ್ವಾಸ ಗೊತ್ತುವಳಿ ನಿರ್ಣಯ ಪಾಸು ಮಾಡಲು ಆಡಳಿತ ಮಂಡಳಿಯಲ್ಲಿನ 2/3 (ಎರಡನೇ ಮೂರರಷ್ಟು) ಚುನಾಯಿತ ನಿರ್ದೇಶಕರ ಬಹುಮತ ಅಗತ್ಯವಿರುತ್ತದೆ. ಸದರಿ ಅವಶ್ವಾಸ ಗೊತ್ತುವಳಿಗೆ ಸೋಲುಂಟಾದಲ್ಲಿ, ಹೊಸದಾಗಿ ಒಂದು ವರ್ಷದೊಳಗೆ ಅವಿಶ್ವಾಸ ಮಂಡಿಸಲು ಅವಕಾಶವಿರುವುದಿಲ್ಲ. ಸಹಕಾರ ಸಂಘಗಳ ಕಾಯ್ದೆ 1959 ಕಲಂ 27ಬಿ ರೀತ್ಯಾ ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗಾಗಿ ಏಳು ತಃಖ್ತೆಗಳನ್ನು ಸಹಕಾರ ಸಂಸ್ಥೆಗಳು ನಿಬಂಧಕರಿಗೆ ಸಲ್ಲಿಸುವುದು ಕಡ್ಡಾಯವಾಗಿದೆ.ತಪ್ಪಿದಲ್ಲಿ ಕಲಂ 109(19) ರೀತ್ಯ ಶಿಕ್ಷಾರ್ಹ ಅಪರಾಧವಾಗಿದೆ. ಇದಕ್ಕಾಗಿ ಆಡಳಿತ ಮಂಡಳಿಯು ಕಾಲ ಕಾಲಕ್ಕೆ ಸಭೆಗಳನ್ನು ನಡೆಸಬೇಕು, ಈ ಸಬೆಗಳನ್ನು ನಡೆಸುವ ವಿಧಾನದ ಬಗ್ಗೆ ಕೆಲವು ವಿಧಾನಗಳನ್ನು ಉಪನಿಯಮನಗಳಲ್ಲಿ ವಿಧಿಸಲಾಗಿರುತ್ತದೆ.ಈ ಬಗ್ಗೆ ಕಾಯಿದೆ ಮತ್ತು ನಿಯಮಗಳಲ್ಲಿ ಸಹ ವಿಧಿಸಲಾಗಿದೆ.

ಯಾವುದೇ ಸಹಕಾರ ಸಂಘದಲ್ಲಿ, ಅದರ ಸದಸ್ಯರಾಗಲೀ ಅಥವಾ ನಿರ್ದೇಶಕರೇ ಆಗಲಿ ಅಥವಾ ಪದಾಧಿಕಾರಿಯೇ ಆಗಿರಲಿ ಅಥವಾ ನೌಕರರೇ ಆಗಿರಲಿ, ಸರ್ಕಾರದ ಪೂರ್ವಾನುಮತಿ ಇಲ್ಲದೆ ಸಂಘದ ಖರ್ಚಿನಲ್ಲಿ ವಿದೇಶ ಪ್ರವಾಸ ಮಾಡುವಂತಿಲ್ಲ. ಹೀಗೆಂದು ಸೆಕ್ಷನ್ 28ಡಿ ನಲ್ಲಿ ವಿಧಿಸಲಾಗಿದೆ. ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಹೆಚ್ ರೀತ್ಯಾ ಸಹಕಾರ ಸಂಘಗಳ ಆಡಳಿತ ಮಂಡಳಿಯಲ್ಲಿ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದ ಎರಡು ವರ್ಷಗಳ ನಂತರ ಅವರುಗಳ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಬಹುದು.ಇದಕ್ಕೆ 1/3 (ಒಂದನೇ ಮೂರರಷ್ಟು) ಚುನಾಯಿತ ನಿರ್ದೇಶಕರ ಕೋರಿಕೆ ಅಗತ್ಯವಿರುತ್ತದೆ.ಸದರಿ ಅವಿಶ್ವಾಸ ಗೊತ್ತುವಳಿ ನಿರ್ಣಯ ಪಾಸು ಮಾಡಲು ಆಡಳಿತ ಮಂಡಳಿಯಲ್ಲಿನ 2/3 (ಎರಡನೇ ಮೂರರಷ್ಟು) ಚುನಾಯಿತ ನಿರ್ದೇಶಕರ ಬಹುಮತ ಅಗತ್ಯವಿರುತ್ತದೆ. ಸದರಿ ಅವಶ್ವಾಸ ಗೊತ್ತುವಳಿಗೆ ಸೋಲುಂಟಾದಲ್ಲಿ, ಹೊಸದಾಗಿ ಒಂದು ವರ್ಷದೊಳಗೆ ಅವಿಶ್ವಾಸ ಮಂಡಿಸಲು ಅವಕಾಶವಿರುವುದಿಲ್ಲ.

ಸಹಕಾರ ಸಂಘಗಳ ಕಾಯ್ದೆ 1959 ಕಲಂ 27ಬಿ ರೀತ್ಯಾ ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗಾಗಿ ಏಳು ತಃಖ್ತೆಗಳನ್ನು ಸಹಕಾರ ಸಂಸ್ಥೆಗಳು ನಿಬಂಧಕರಿಗೆ ಸಲ್ಲಿಸುವುದು ಕಡ್ಡಾಯವಾಗಿದೆ. ತಪ್ಪಿದಲ್ಲಿ ಕಲಂ 109(19) ರೀತ್ಯ ಶಿಕ್ಷಾರ್ಹ ಅಪರಾಧವಾಗಿದೆ.

### ಆಡಳಿತ ಮಂಡಳಿಗೆ ಚುನಾವಣೆ ಕಲಂ 39ಎ

ಪ್ರತಿ ಸಹಕಾರ ಸಂಘದಲ್ಲೂ 5 ವರ್ಷಕ್ಕೊಮ್ಮೆ ಆಡಳಿತ ಮಂಡಳಿಗೆ ಚುನಾವಣೆಗಳು ನಡೆಯಬೇಕು. ಈ ಚುನಾವಣೆಯಲ್ಲಿ ಪ್ರತಿ ಸದಸ್ಯನಿಗೂ – ಅವನ ಷೇರು ಹಣ ಎಷ್ಟೇ ಇರಲಿ – ಒಂದು ಮತ ಇರುತ್ತದೆ. ಕರ್ನಾಟಕದಲ್ಲಿ ಸಹಕಾರ ಸಂಘಗಳಿಗೆ ಚುನಾವಣೆಗಳನ್ನು ಸಹಕಾರ ಚುನಾವಣಾ ಪ್ರಾಧಿಕಾರ ನಡೆಸುತ್ತದೆ. ಈ ಪ್ರಾಧಿಕಾರದಲ್ಲಿ ಸರ್ಕಾರವು ನೇಮಕ ಮಾಡಿದ ಒಬ್ಬ ಚುನಾವಣಾ ಆಯುಕ್ತ ಮತ್ತು ಒಬ್ಬ ಕಾರ್ಯದರ್ಶಿ ಇರುತ್ತಾರೆ. (ಸೆಕ್ಷನ್39ಎ) ಪ್ರಾಧಿಕಾರಕ್ಕೆ

**ಪ್ರಾಥಮಿಕ ಹಂತದ (ಕೃಷಿಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ನಗರಗಳಲ್ಲಿನ ಪತ್ತಿನ ಸಹಕಾರ ಸಂಘಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ನೇಕಾರರ ಸಹಕಾರ ಸಂಘಗಳು, ಇತ್ಯಾದಿ) ಸಂಘಗಳು ಮೊದಲು ಚುನಾವಣೆ ನಡೆಸಬೇಕು.ನಂತರ ಮಾಧ್ಯಮಿಕ ಸಂಘಗಳ ಚುನಾವಣೆ ನಡೆಸಬೇಕು.ಆಮೇಲೆ ಸಂಯುಕ್ತ ಸಂಘಗಳು ನಡೆಸಬೇಕು. ಕಡೆಯ ಹಂತದಲ್ಲಿ ಶೃಂಗ ಸಹಕಾರ ಸಂಘಗಳು ಚುನಾವಣೆ ನಡೆಸಬೇಕು ಎಂದು ವಿಧಿಸಲಾಗಿದೆ. ಪ್ರಾಧಿಕಾರ ಬಂದ ಮೇಲೆ ಮತದಾರರ ಪಟ್ಟಿ ತಯಾರಿಕೆಯ ಕೆಲಸವನ್ನು ಸಹ ಪ್ರಾಧಿಕಾರಕ್ಕೆ ವಹಿಸಲಾಗಿದೆ.ಚುನಾವಣಾ ಪ್ರಾರಂಭದ ಹಂತದಿಂದ ಹಿಡಿದು ಕಟ್ಟಕಡೆಯ ಹಂತದವರೆಗೆ ಯಾವರೀತಿ ವಿಧಿವಿಧಾನಗಳು ಇರಬೇಕು ಎಂಬುವುದನ್ನು ನಿಯಮ (13ಬಿ ಯಿಂದ 14 ಜೆಡ್) ಗಳಲ್ಲಿ ವಿಧಿಸಲಾಗಿದೆ.**

ಸಹಕಾರ ಸಂಘಗಳ ಚುನಾವಣೆಗಳ ಮೇಲುಸ್ತುವಾರಿ, ನಿರ್ದೇಶನ ಮತ್ತು ಹತೋಟಿಗಳ ಕರ್ತವ್ಯ ಇರುತ್ತದೆ. ಮತದಾರರ ಪಟ್ಟಿಯ ತಯಾರಿಕೆಯಿಂದ ಹಿಡಿದು ಚುನಾವಣೆಯ ಫಲಿತಾಂಶ ಘೋಷಣೆ ಮತ್ತು ನಂತರ ಅಧ್ಯಕ್ಷ ಮುಂತಾದವರ ಚುನಾವಣೆಯ ವರೆಗೂ ಪ್ರಾಧಿಕಾರದ ಕಾರ್ಯವ್ಯಾಪ್ತಿ ಇರುತ್ತದೆ.

ಚುನಾವಣೆ ನಡೆಸಲು ಹಾಲಿ ಅಧಿಕಾರದಲ್ಲಿರುವ ಆಡಳಿತ ಮಂಡಳಿಯು ಅದರ ಅಧಿಕಾರದ ಅವಧಿ ಮುಗಿಯುವುದಕ್ಕೆ ಕಡೆ ಪಕ್ಷ ಆರು ತಿಂಗಳು ಮುಂಚಿತವಾಗಿ ಪ್ರಾಧಿಕಾರಕ್ಕೆ ತಿಳಿಸಬೇಕು.ಪ್ರಾಧಿಕಾರಕ್ಕೆ ಚುನಾವಣೆ ನಡೆಸಲು ಅಗತ್ಯವಾದ ದಾಖಲೆಗಳು ಮಾಹಿತಿ ಮುಂತಾದುವನ್ನು ಒದಗಿಸಬೇಕು. ಹಾಗೂ ಎಲ್ಲ ರೀತಿಯ ಸಹಾಯ ಮತ್ತು ಸಹಕಾರಗಳನ್ನು ನೀಡಬೇಕು. ಹೀಗೆಂದು ಕಾಯಿದೆ ವಿಧಿಸಿರುತ್ತದೆ. ಚುನಾವಣಾ ವೆಚ್ಚವನ್ನು ಸಂಘವೇ ಭರಿಸಬೇಕು.ಸಾಮಾನ್ಯ ಚುನಾವಣೆಯಲ್ಲಿ ವಿಧಿಸಲಾಗಿರುವ ಬಹುತೇಕ ನಿಬಂಧನೆಗಳನ್ನು ಸಹಕಾರ ಸಂಘಗಳಿಗೂ ವಿಧಿಸಲಾಗಿದೆ. (ವಿವರಗಳು ಸೆಕ್ಷನ್ 39ಸಿ ಯಿಂದ ಸೆಕ್ಷನ್ 39ಕೆ)

ಪ್ರಾಥಮಿಕ ಹಂತದ (ಕೃಷಿಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ನಗರಗಳಲ್ಲಿನ ಪತ್ತಿನ ಸಹಕಾರ ಸಂಘಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ನೇಕಾರರ ಸಹಕಾರ ಸಂಘಗಳು, ಇತ್ಯಾದಿ) ಸಂಘಗಳು ಮೊದಲು ಚುನಾವಣೆ ನಡೆಸಬೇಕು.ನಂತರ ಮಾಧ್ಯಮಿಕ ಸಂಘಗಳ ಚುನಾವಣೆ ನಡೆಸಬೇಕು. ಆಮೇಲೆ ಸಂಯುಕ್ತ ಸಂಘಗಳು ನಡೆಸಬೇಕು. ಕಡೆಯ ಹಂತದಲ್ಲಿ ಶೃಂಗ ಸಹಕಾರ ಸಂಘಗಳು ಚುನಾವಣೆ ನಡೆಸಬೇಕು ಎಂದು ವಿಧಿಸಲಾಗಿದೆ.

ಪ್ರಾಧಿಕಾರ ಬಂದ ಮೇಲೆ ಮತದಾರರ ಪಟ್ಟಿ ತಯಾರಿಕೆಯ ಕೆಲಸವನ್ನು ಸಹ ಪ್ರಾಧಿಕಾರಕ್ಕೆ ವಹಿಸಲಾಗಿದೆ.ಚುನಾವಣಾ ಪ್ರಾರಂಭದ ಹಂತದಿಂದ ಹಿಡಿದು ಕಟ್ಟಕಡೆಯ ಹಂತದವರೆಗೆ ಯಾವರೀತಿ ವಿಧಿವಿಧಾನಗಳು ಇರಬೇಕು ಎಂಬುವುದನ್ನು ನಿಯಮ (13ಬಿ ಯಿಂದ 14 ಜೆಡ್) ಗಳಲ್ಲಿ ವಿಧಿಸಲಾಗಿದೆ.

### ಆಡಳಿತ ಮಂಡಳಿಯ ರದ್ದತಿ ಕಲಂ–30

ಪ್ರತಿ ಸಹಕಾರ ಸಂಘದಲ್ಲೂ ಇರುವ ಆಡಳಿತ ಮಂಡಳಿಯು ಸಂಘದ ವ್ಯವಹಾರಗಳನ್ನು ಸಂಘದ ಉಪನಿಯಮ, ನಿಯಮ ಮತ್ತು ಕಾಯಿದೆಗಳಿಗೆ ಅನುಸಾರವಾಗಿ ನಡೆಸುತ್ತಾ ಸಂಘದ ಧ್ಯೇಯೋದ್ದೇಶಗಳನ್ನು ಸಾಧಿಸಬೇಕು; ಸಂಘವು ಆರ್ಥಿಕವಾಗಿ ಯಶಸ್ವಿಯೂ ಮತ್ತು ಸದೃಢವೂ ಆಗುವಂತೆ ಕೆಲಸ ಮಾಡಬೇಕು.ಈ ನಿಟ್ಟಿನಲ್ಲಿ ನಿಬಂಧಕರಿಂದ ಮತ್ತು ಕೆಲವು ಬಾರಿ ಸರ್ಕಾರದಿಂದ, ಬರುವ ಸುತ್ತೋಲೆಗಳು, ನಿರ್ದೇಶನಗಳು ಆದೇಶಗಳು ಮುಂತಾದವುಗಳನ್ನು ಆಡಳಿತ ಮಂಡಳಿಯು ಸೂಕ್ತ ರೀತಿಯಲ್ಲಿ ತನ್ನ ಸಂಘಕ್ಕೆ ಅನ್ವಯಿಸಿಕೊಂಡು ಮಾರ್ಗದರ್ಶನ ಪಡೆಯಬೇಕು.ಇದಿಷ್ಟೂ ಆಡಳಿತ ಮಂಡಳಿಯ ಪ್ರಮುಖ ಕರ್ತವ್ಯ.

ಆದರೆ ಅನೇಕ ಸಂಘಗಳಲ್ಲಿ ಕೆಲವು ಬಾರಿ ಆಡಳಿತ ಮಂಡಳಿಯು ತನ್ನ ಕೆಲಸಗಳನ್ನು ಸರಿಯಾಗಿ ನಿರ್ವಹಿಸುವುದಿಲ್ಲ. ಇದರಿಂದ ಸಂಘಕ್ಕೆ ತುಂಬಾ ಹಾನಿ ಉಂಟಾಗುವ ಸಂದರ್ಭದಲ್ಲಿ ನಿಬಂಧಕರು ಮಧ್ಯೆ ಪ್ರವೇಶ ಮಾಡಿ ಆಡಳಿತ ಮಂಡಳಿಯನ್ನು ತೆಗೆದುಹಾಕಿ ಆಡಳಿತ ಮಂಡಳಿಯ ಜಾಗದಲ್ಲಿ ಆಡಳಿತಾಧಿಕಾರಿ ಯನ್ನು ನೇಮಕ ಮಾಡಬಹುದಾಗಿದೆ.

**ಈ ಕೆಳಕಂಡ ಪರಿಸ್ಥಿತಿಗಳಲ್ಲಿ ಯಾವುದಾದರೂ ಒಂದು ಉಂಟಾದರೂ ನಿಬಂಧಕರು ಆಡಳಿತಾಧಿ ಕಾರಿಯನ್ನು ನೇಮಿಸಬಹುದು:**

1. ಆಡಳಿತ ಮಂಡಳಿಯು ಕಾಯಿದೆ, ನಿಯಮ ಅಥವಾ ಉಪನಿಯಮಗಳ ಪ್ರಕಾರ ಮಾಡಬೇಕಾದ ಕರ್ತವ್ಯಗಳನ್ನು ಮಾಡುವಲ್ಲಿ ಸತತವಾಗಿ ನಿರ್ಲಕ್ಷ್ಯ ಮಾಡಿದಲ್ಲಿ ಅಥವಾ ಲೋಪ ಮಾಡಿದಲ್ಲಿ, ಅಥವಾ
2. ಆಡಳಿತ ಮಂಡಳಿಯು ಸಂಘದ ಅಥವಾ ಸದಸ್ಯರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಏನೇ ಕೆಲಸ ಮಾಡಿದಲ್ಲಿ
3. ಆಡಳಿತ ಮಂಡಳಿಯು ಕಾಯಿದೆ ಅಥವಾ ನಿಯಮಗಳ ಪ್ರಕಾರ ಹೊರಡಿಸಿರುವ ಯಾವುದೇ ಆದೇಶ ಅಥವಾ ನಿರ್ದೇಶನವನ್ನು ಪಾಲಿಸದೆ ಇದ್ದಲ್ಲಿ ಅಥವಾ ಉದ್ದೇಶ ಪೂರ್ವಕವಾಗಿ ಉಲ್ಲಂಘಿಸಿದಲ್ಲಿ
4. ಸಂಘದಲ್ಲಿ ಗಂಭೀರ ರೀತಿಯ ಆರ್ಥಿಕ ಅಕ್ರಮಗಳು ಅಥವಾ ವಂಚನೆಯ ಕೃತ್ಯಗಳು ಪತ್ತೆ ಆಗಿದ್ದಲ್ಲಿ:
5. ಆಡಳಿತ ಮಂಡಳಿಯು ಚುನಾವಣಾ ಆಯೋಗಕ್ಕೆ ದಾಖಲೆಗಳು, ಮಾಹಿತಿ, ಸಹಾಯ ಮುಂತಾದುವನ್ನು ಸಕಾಲದಲ್ಲಿ ಕೊಡಲು ವಿಫಲವಾದಲ್ಲಿ;
6. ಆಡಳಿತ ಮಂಡಳಿಯ ರಚನೆಯಲ್ಲಿ ಅಥವಾ ಕೆಲಸಮಾಡುವಲ್ಲಿ ಬಿಕ್ಕಟ್ಟು ಉಂಟಾಗಿದ್ದಲ್ಲಿ; ಇತ್ಯಾದಿ

ಮುಂದುವರೆಯುವುದು....